ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜೂನ್-2017
ಬೆಲೆ ರೂ. 1



ದೆಹಲಿ ಕರ್ನಾಟಕ ಸಂಘದ ಮಾಜೀ ಅಧ್ಯಕ್ಷ, ಭಾರತ ಸರ್ಕಾರದ ಮಾಜೀ ಪ್ರಧಾನ ವಾರ್ತಾಧಿಕಾರಿ

## ಐ. ರಾಮಮೋಹನ ರಾವ್ ಇನ್ನಿಲ್ಲ

ಸಂಪುಟ 27 ಸಂಚಿಕೆ 9
ಜೂನ್ 2017, ಬೆಲೆ ರೂ. 1

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 9958807225
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟೀಲ್ 9650182413
ಬಾಬುರಾಜ್ ಪೂಜಾರಿ 9818807696
ತ್ಯಾಗೇಶ್ ಮೂರ್ತಿ 9868393961
ಸಂತೋಷ್ ಜೆ. 9911235783

**ವಿಶೇಷ ಆಹ್ವಾನಿತರು**
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

## ನೇರ ಮಾತು

ದೆಹಲಿಗೆ ನಾನು 1982ರಲ್ಲಿ ಬಂದಾಗಿನಿಂದ ಇಂದಿನವರೆಗೆ ನನ್ನ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಅತ್ಯಂತ ಆದರ್ಶಪ್ರಾಯರು ಮತ್ತು ಗೌರವಾನ್ವಿತರಾದವರಲ್ಲಿ ಇನ್ನ ರಾಮಮೋಹನ ರಾಯರು ಮೊದಲಿಗರು. 80ರ ದಶಕದಲ್ಲೇ ಅತ್ಯಂತ ಕಿರಿಯ ವಯಸ್ಸಿನ ನಾನು ದೆಹಲಿಯ ಕನ್ನಡ ಚಟುವಟಿಕೆಗಳಲ್ಲಿ ಸಕ್ರಿಯನಾಗಿದ್ದೆ. ಆಗಾಗ ಸಾಹಿತ್ಯ ವಿಚಾರಗೋಷ್ಠಿಗಳನ್ನು ಏರ್ಪಡಿಸುತ್ತಿದ್ದೆ. ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದೆ. ಈ ಎಲ್ಲಾ ಸಂದರ್ಭಗಳಲ್ಲೂ ರಾಮಮೋಹನ ರಾವ್ ಅವರನ್ನು ಕೇವಲ ದೂರವಾಣಿ ಮೂಲಕ ಸಂಪರ್ಕಿಸಿದರೆ ಸಾಕು, ತಪ್ಪದೇ ಕಾರ್ಯಕ್ರಮಗಳಿಗೆ ಹಾಜರಾಗುತ್ತಿದ್ದರು. ನಂತರ ಕಾರ್ಯಕ್ರಮ ನೋಡಿ ನನ್ನ ಬೆನ್ನು ತಟ್ಟುತ್ತಿದ್ದರು. ಮುಂದೆ ಏನು ಮಾಡಬೇಕೆಂಬ ಸಲಹೆ ನೀಡಿ ಪ್ರೋತ್ಸಾಹಿಸುತ್ತಿದ್ದರು. 1985–86ರಲ್ಲಿ ನಾನು ಸಂಘದ ಜಂಟಿ ಕಾರ್ಯದರ್ಶಿಯಾಗಿದ್ದೆ. ಹೀಗಾಗಿ ನನಗೆ ಸಂಘದ ಅಂದಿನ ಅಧ್ಯಕ್ಷರುಗಳಾಗಿದ್ದ ದಿ. ಡಾ. ಸರೋಜಿನಿ ಮಹಿಷಿ, ಜಿ.ವೈ. ಕೃಷ್ಣನ್, ಎಸ್. ಗೋಪಾಲ ಶಾಸ್ತ್ರಿ, ಎ.ಪಿ. ಕುಮಟಾಕರ್, ಕೆ.ಆರ್. ನಾಗರಾಜ ಹಾಗೂ ಶ್ರೀ ಎನ್.ಪಿ. ಭಟ್, ಶ್ರೀ ಸಿ.ವಿ. ಗೋಪಿನಾಥ್, ಡಾ. ಪುರುಷೋತ್ತಮ ಬಿಳಿಮಲೆ, ಡಾ. ವೆಂಕಟಾಚಲ ಹೆಗಡೆಯವರ ಜೊತೆ ಒಂದಲ್ಲ ಒಂದು ರೀತಿಯಲ್ಲಿ ಕನ್ನಡದ ಕೆಲಸ ಮಾಡುವ ಭಾಗ್ಯ ನನ್ನದಾಗಿತ್ತು. ಆದರೆ ಅಂದಿನಿಂದ ಇಂದಿನವರೆಗೆ ನನ್ನ ಜೀವನದ ಹೆಜ್ಜೆ ಹೆಜ್ಜೆಯಲ್ಲೂ ಮಾರ್ಗದರ್ಶಕರಾಗಿ ನನ್ನನ್ನು ಪ್ರೋತ್ಸಾಹಿಸಿ ಬೆಳೆಸಿದವರು ಐ. ರಾಮಮೋಹನ ರಾವ್ ಅವರು.

ಭಾರತ ಸರಕಾರದ ಪ್ರಧಾನ ವಾರ್ತಾಧಿಕಾರಿಯಾಗಿ, ನಾಲ್ಕು ಪ್ರಧಾನ ಮಂತ್ರಿಗಳ ಮಾಧ್ಯಮ ಸಲಹೆಗಾರರಾಗಿ, ದೇಶಕ್ಕೆ ವಿಶೇಷ ಸೇವೆ ಸಲ್ಲಿಸಿದ ಹಿರಿಯ ಕನ್ನಡಿಗ ರಾಮಮೋಹನ ರಾವ್ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಮತ್ತು ಸಾಂಸ್ಕೃತಿಕ ಸಮುಚ್ಚಯ ಸಮಿತಿಯ ಅಧ್ಯಕ್ಷರಾಗಿ ನೀಡಿದ ಕೊಡುಗೆ ಅಮೂಲ್ಯವಾದುದು. ಇಂತಹ ಒಬ್ಬ ಸರಳ ಸಜ್ಜನ ಕನ್ನಡಿಗನ ಸಾಧನೆಯ ಕುರಿತಾಗಿ ಕನ್ನಡದಲ್ಲಿ ಒಂದು ಕೃತಿ ತರುವಂತೆ ಮಿತ್ರ ಡಾ. ಅವನೀಂದ್ರನಾಥ್ ರಾವ್ ನನಗೆ ಪ್ರೇರಣೆ ನೀಡಿದರು. ಅಂತೆಯೇ ಕೃತಿಯನ್ನು ಹೊರತರಲು ಸಾಧನೆ ಮಾಡಿದವರು ಬಾಲಕೃಷ್ಣ ನಾಯ್ಕ್ ಡಿ., ನನ್ನ ದೆಹಲಿ ಮಿತ್ರ ಪ್ರಕಾಶನದಿಂದ ಮಲಾರ್ ಜಯರಾಮ ರೈಯವರ ಸಂಪಾದಕತ್ವದಲ್ಲಿ ಹೊರ ತಂದ 'ಅದಮ್ಯ' ಕೃತಿ ಬಹುಶಃ ನನ್ನ ಜೀವನದ ದಾಖಲೆಯಲ್ಲೊಂದು.

ರಾಮಮೋಹನ ರಾವ್ ಅವರು ನನ್ನಂತೆಯೇ ದೆಹಲಿಯಲ್ಲಿರುವ ಹಲವಾರು ಮಂದಿ ಕನ್ನಡಿಗರಿಗೆ ಮಾರ್ಗದರ್ಶಕರೂ ಮತ್ತು ಸ್ಫೂರ್ತಿದಾಯಕರೂ ಆಗಿದ್ದರು. ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಹಾಗೂ ದೆಹಲಿಯಲ್ಲಿರುವ ಹಲವಾರು ಇತರ ಕನ್ನಡ ಮತ್ತು ತುಳು ಚಟುವಟಿಕೆಗಳನ್ನು ನಡೆಸುತ್ತಾ ಬಂದಿರುವ ಸಂಘ ಸಂಸ್ಥೆಗಳಿಗೆ ರಾವ್ ಅವರು ಸದಾ ತಮ್ಮ ಅಮೂಲ್ಯವಾದ ಸಲಹೆ, ಸಹಕಾರಗಳನ್ನು ನೀಡುತ್ತಲೇ ಬಂದಿದ್ದಾರೆ. ಎಂತಹ ಗಂಭೀರ ಪರಿಸ್ಥಿತಿಯಲ್ಲೂ ಕೂಡಾ ಅತ್ಯಂತ ಸಂಯಮದಿಂದ ಎಲ್ಲರಿಗೂ ತೃಪ್ತಿ ಆಗುವಂತಹ ತೀರ್ಮಾನಗಳನ್ನು ಕೈಗೊಳ್ಳಲು ಸಹಕರಿಸಿದ್ದಾರೆ. ಅಂದಿನಿಂದ ಇಂದಿನವರೆಗೆ ಕನ್ನಡ ಭಾಷೆ, ಸಂಸ್ಕೃತಿ ಮತ್ತು ದೆಹಲಿ ಕನ್ನಡಿಗರ ಏಳಿಗೆಗಾಗಿ ಸದಾ ತಮ್ಮನ್ನು ಮುಡಿಪಾಗಿಟ್ಟ ಅಗಲಿದ ಐ. ರಾಮಮೋಹನ ರಾವ್ ಅವರ ಕನ್ನಡ ಪ್ರೇಮ, ಸಂಘದ ಮೇಲಿನ ಪ್ರೀತಿ, ಸಜ್ಜನಿಕೆ ಮತ್ತು ಸರಳತೆ ಇತ್ಯಾದಿಗಳನ್ನು ನಮ್ಮದಾಗಿಸಿಕೊಳ್ಳುವ ಮೂಲಕ ಅವರಿಗೆ ಶ್ರದ್ಧಾಂಜಲಿಯನ್ನು ಕೋರೋಣ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಅಭಿಮತ ರಸಪ್ರಶ್ನೆ

1. 'ಬೀಟ್ ಬಾಕ್ಸ್ ಮ್ಯೂಸಿಕ್' ಕಾರ್ಯಕ್ರಮ ನೀಡಿದ ಕಲಾವಿದೆ ಯಾರು?
2. ಐ. ರಾಮಮೋಹನ ರಾಯರು ಸಾಂಸ್ಕೃತಿಕ ರಾಯಭಾರಿಯಾಗಿ ಹೋದ ದೇಶ ಯಾವುದು?
3. ದೆಹಲಿ ಕರ್ನಾಟಕ ಸಂಘದಲ್ಲಿ ಐ. ರಾಮಮೋಹನ ರಾಯರು ವಹಿಸಿದ್ದ ಎರಡು ಪ್ರಮುಖ ಜವಾಬ್ದಾರಿಗಳು ಯಾವುವು?
4. ಐ. ರಾಮಮೋಹನ ರಾಯರು ಸೇವೆ ಸಲ್ಲಿಸಿದ ಪ್ರಧಾನಮಂತ್ರಿಗಳ ಹೆಸರೇನು?
5. ಕರ್ಣಾಟಕ ಬ್ಯಾಂಕಿನ ಸಿಇಒ ಶ್ರೀ ಮಹಾಬಲೇಶ್ವರ ಭಟ್ ದೆಹಲಿಯ ತಮ್ಮ ಸೇವಾ ಕಾರ್ಯಾವಧಿಯಲ್ಲಿ ಕರ್ಣಾಟಕ ಬ್ಯಾಂಕಿನ ಎಷ್ಟು ಶಾಖೆಗಳನ್ನು ತೆರೆದಿದ್ದಾರೆ.

ಅಭಿಮತದ ಓದುಗರು ಈ ಮೇಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಅಂಚೆ ಮೂಲಕ ಅಥವಾ ಸಂಘದ ಇಮೇಲ್ : dksangha@gmail.com ಮೂಲಕ ದಿನಾಂಕ 25.06.2017ರ ಒಳಗಾಗಿ ತಲುಪಿಸತಕ್ಕದ್ದು. ಎಲ್ಲಾ ಸರಿಯಾದ ಉತ್ತರ ಕಳುಹಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಅಲ್ಲದೇ ಅವರನ್ನು ಯೋಗ್ಯವಾಗಿ ಪುರಸ್ಕರಿಸಲಾಗುವುದು. ರಸಪ್ರಶ್ನೆಯಲ್ಲಿ ಅಭಿಮತ ಸಂಪಾದಕ ಮಂಡಳಿಯವರು, ಅವರ ಮನೆಯವರು, ಸಂಘದ ಕಾರ್ಯಕಾರಿ ಸಮಿತಿಯವರು ಮತ್ತು ಅವರ ಮನೆಯವರು ಭಾಗವಹಿಸುವಂತಿಲ್ಲ.

ಮೇ 2017ರ ಅಭಿಮತ ಪತ್ರಿಕೆಯಲ್ಲಿ ಪ್ರಕಟವಾದ ರಸಪ್ರಶ್ನೆಗಳಿಗೆ **ಸರಿಯಾದ ಉತ್ತರ**
1) ಕಮಾಂಡೆಂಟ್ ಎಸ್.ಡಿ.ಜಿ. ಶ್ರೀ ಹರ್ಷವರ್ಧನ 2) ಪ್ರೊ. ಎಚ್.ಎಸ್. ಶಿವಪ್ರಕಾಶ್ 3) ದಿ. ಡಾ. ಎಂ.ಎಂ. ಕಲಬುರ್ಗಿ 4) ಅಭಿನಯ ಕಲಾ ಮಿಲನ ಚಾರಿಟೇಬಲ್ ಟ್ರಸ್ಟ್, ಭಾಗಮಂಡಲ ಮತ್ತು ಕಿರಣ್ ಕೆ.ಜೆ. ಅವರ ಟೀಮ್ ಆಟಿಟ್ಯೂಡ್ ಡಾನ್ಸ್ ಸ್ಟುಡಿಯೋ, ಕುಶಾಲನಗರ ತಂಡ 5.) ಕುಳಕುಂದ ಶಿವರಾಯ.

**ಸರಿಯಾದ ಉತ್ತರ ಕಳುಹಿಸಿದವರು.**
ಶ್ರೀ ಶ್ರೀಧನ್ ಮೂರ್ತಿ, ಶ್ರೀಮತಿ ಮೇಘನಾ ರಮೇಶ್, ಶ್ರೀ ರಾಜಶೇಖರ ಡಿ.ಎಸ್.

## ಮುನ್ನೋಟ

ಆತ್ಮೀಯರೇ,

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಮೊಟ್ಟಮೊದಲಿಗೆ ನಾನು ಜಂಟಿ ಕಾರ್ಯದರ್ಶಿಯಾಗಿ ಚುನಾಯಿತನಾಗಿ ಬಂದಾಗ ನನಗೆ ಮೊದಲು ಭೇಟಿಯಾಗಿದ್ದು, ಹಿರಿಯ ಮುತ್ಸದ್ದಿ ಶ್ರೀ ಐ. ರಾಮಮೋಹನ ರಾಯರು. ನಾಲ್ಕು ಮಂದಿ ಪ್ರಧಾನಮಂತ್ರಿಗಳಿಗೆ ಸಲಹೆಗಾರರಾಗಿ ಸೇವೆ ಮಾಡಿರುವ ಇವರು ದೆಹಲಿ ಕರ್ನಾಟಕ ಸಂಘಕ್ಕೆ ಕೂಡಾ ಅಪಾರವಾದ ಕೊಡುಗೆ ನೀಡಿದ್ದಾರೆ. ಇವರ ಮಾರ್ಗದರ್ಶನದಲ್ಲಿ ನನಗೆ ಕೆಲಸ ಮಾಡಲು ತುಂಬಾ ಸಹಾಯ ದೊರೆಯಿತು. ಸಂಘದ ಸಾಂಸ್ಕೃತಿಕ ಸಮುಚ್ಚಯದ ಕಟ್ಟಡ ಬರುತ್ತಿರುವಾಗ ಇವರ ಅಧ್ಯಕ್ಷತೆಯಿಂದ ನಮಗೆ ಅಪಾರ ಸಹಕಾರ ಮತ್ತು ಕೊಡುಗೆ ದೊರೆತಿದೆ. ರಾವ್ ಅವರ ಈ ನಿಸ್ವಾರ್ಥ ಸೇವೆಗೆ ನಾವು ಸದಾ ಕೃತಜ್ಞರು. ಮೃದುವಾಗಿ ಮಾತನಾಡುತ್ತ, ನಗುನಗುತ್ತಲೇ ನಮ್ಮ ಸಂಘದ ಎಲ್ಲಾ ಕಾರ್ಯಚಟುವಟಿಕೆಗಳಿಗೆ ಮಾರ್ಗದರ್ಶನ ನೀಡುತ್ತಿದ್ದ ಇವರು ನಮ್ಮೆಲ್ಲರನ್ನು ಬಿಟ್ಟು ಅಗಲಿರುವುದು ಅತ್ಯಂತ ದುಃಖದಾಯಕ ಹಾಗು ವಿಷಾದನೀಯವಾದ ಸಂಗತಿ. ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾಗೂ ನನ್ನ ವೈಯಕ್ತಿಕವಾಗಿ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತಿದ್ದೇನೆ. ಆದಷ್ಟು ಬೇಗನೆ ಸಂಘದಲ್ಲಿ ಇವರ ನೆನಪಿಗಾಗಿ ಒಂದು ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗುವುದು.

ಸಂಘದ ಸಾಂಸ್ಕೃತಿಕ ಸಮುಚ್ಚಯದ ಕಟ್ಟಡ ಮೇಲೆ ಬರುತ್ತಿರುವಾಗ ಕರ್ಣಾಟಕ ಬ್ಯಾಂಕಿನ ಶ್ರೀ ಮಹಾಬಲೇಶ್ವರ ಭಟ್ ಅವರನ್ನು ಪರಿಚಯಿಸಿದ್ದು ಐ. ರಾಮಮೊಹನ ರಾವ್ ಅವರು. ಶ್ರೀ ಮಹಾಬಲೇಶ್ವರ ಭಟ್ ಅವರು ಸಂಘಕ್ಕೆ ಸಹಕಾರ ನೀಡುತ್ತಾ ಬಂದು ಅವರ ಬ್ಯಾಂಕಿನ ಶಾಖೆಯನ್ನು ದೆಹಲಿ ಕರ್ನಾಟಕ ಸಂಘದ ಕಟ್ಟಡದಲ್ಲಿ ಆರಂಭಿಸಿದಂತಹ ಇವರು ಈಗ ಕರ್ಣಾಟಕ ಬ್ಯಾಂಕಿನ ಸಿ.ಇ.ಓ. ಆಗಿ ನೇಮಕ ಆಗಿರುವುದು ನಮಗೆಲ್ಲರಿಗೂ ಸಂತಸದ ವಿಷಯ. ದೆಹಲಿಗೆ ಬಂದು ಸಂಘವು ಇದೇ ಮೇ20ರಂದು ಆಯೋಜಿಸಿದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿದ ಶ್ರೀ ಮಹಾಬಲೇಶ್ವರ ಭಟ್ ಅವರಿಗೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ ಕಲಾವಿದರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಅಭಿನಂದನೆಗಳು.

ಈ ಬಾರಿ ಯು.ಪಿ.ಎಸ್.ಸಿ ಪರೀಕ್ಷೆಯಲ್ಲಿ ಕರ್ನಾಟಕದಿಂದ ಉತ್ತೀರ್ಣರಾದವರ ಸಂಖ್ಯೆ 58. ಅವರ ಪೈಕಿ ಸಂಘದ ಜೊತೆಗೂಡಿ ನಮ್ಮೆಲ್ಲಾ ಕಾರ್ಯಕ್ರಮಗಳಿಗೆ ನಮ್ಮೊಂದಿಗೆ ಬಾಗವಹಿಸಿದ ಶ್ರೀಮತಿ ಮತ್ತು ಶ್ರೀ ವಿಮಲಾ ರಮೇಶ್ ಅವರ ಮಗಳಾದ ಕುಮಾರಿ ನಂದಿನಿ ಈಗ ಯು.ಪಿ.ಎಸ್.ಸಿ ಯಲ್ಲಿ ಭಾರತದಲ್ಲೇ ಮೊದಲ ಸ್ಥಾನ ಪಡೆದಿರುತ್ತಾರೆ. ಈ ಮೂಲಕ ಕರ್ನಾಟಕಕ್ಕೆ ಹೆಮ್ಮೆ ಮತ್ತು ಕೀರ್ತಿ ತಂದಿರುವ ನಂದಿನಿ ಅವರಿಗೂ ಹಾಗೂ ಯಶಸ್ವಿಯಾದ ಎಲ್ಲಾ ಅಭ್ಯರ್ಥಿಗಳಿಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ಯು.ಪಿ.ಎಸ್.ಸಿ ಪರೀಕ್ಷೆ ಬರೆಯಲು ಬರುವ ಎಲ್ಲಾ ವಿದ್ಯಾರ್ಥಿಗಳಿಗೆ ನಂದಿನಿ ಪ್ರೇರಣೆಯಾಗಲೆಂದು ಆಶಿಸುತ್ತೇನೆ. ಸಂಘದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ, ವಾರ್ಷಿಕ ಆಟೋಟ ಸ್ಪರ್ಧೆಗಳಲ್ಲಿ ಕು. ನಂದಿನಿ ಅವರು ಭಾಗವಹಿಸಿ ಕ್ವಿಜ್ ಸ್ಪರ್ಧೆಯಲ್ಲಿ ಮೊದಲನೇ ಸ್ಥಾನವನ್ನು ಪಡೆದಿದ್ದರು. ಅವರು ನಮ್ಮೂರಿನ ಕೋಲಾರದವರೇ ಇದು ನನಗೆ ವೈಯಕ್ತಿಕವಾಗಿ ಸಂತೋಷದ ವಿಷಯವೆ. ಜೊತೆಗೆ ಯು.ಪಿ.ಎಸ್.ಸಿ. ಕೋಚಿಂಗ್ ನೀಡುತ್ತಿರುವ 'ಸ್ಪರ್ಧಾ ಮಿತ್ರ' ಎಂಬ ಬೆಂಗಳೂರಿನ ಸಂಸ್ಥೆಯ ಶ್ರೀ ಓಂಕಾರ್ ಪಾಟೀಲರು ದೆಹಲಿ ಕರ್ನಾಟಕ ಸಂಘಕ್ಕೆ ಬಂದು ಮೌಖಿಕ ಸಂದರ್ಶನಕ್ಕೆ ಸಹಕಾರವನ್ನು ಕೇಳಿದ್ದರು. ಆವಾಗ ನಾನು ಶ್ರೀಮತಿ ಧನಲಕ್ಷ್ಮೀ ಐ.ಎ.ಎಸ್. ಮತ್ತು ಶ್ರೀ ಅಮರನಾಥ ತಳವಾಡೆ ಅವರನ್ನು ಪರಿಚಯಿಸಿದ್ದೆ. ಈ ಎರಡೂ ಐ.ಎ.ಎಸ್. ಅಧಿಕಾರಿಗಳಿಂದ ಮಾರ್ಗದರ್ಶನ ಪಡೆದ 18 ಮಕ್ಕಳು ಉತ್ತೀರ್ಣರಾಗಿದ್ದಾರೆ. ಈ ಈರ್ವರೂ ಐ.ಎ.ಎಸ್. ಅಧಿಕಾರಿಗಳಿಗೆ, ಸಂದರ್ಶನದಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳಿಗೆ ಮತ್ತು ಸಂದರ್ಶನದ ಆಯೋಜಕರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಮುಂಬರುವ ದಿನಗಳಲ್ಲಿ ಇನ್ನೂ ಅತೀ ಹೆಚ್ಚಾಗಿ ಕರ್ನಾಟಕದಿಂದ ಐಎಎಸ್. ಪರೀಕ್ಷೆ ಬರೆಯಲು ವಿದ್ಯಾರ್ಥಿಗಳು ಬರಲಿ ಅವರಿಗೆ ದೆಹಲಿ ಕರ್ನಾಟಕ ಸಂಘದಿಂದ ಸಾಧ್ಯವಾದಷ್ಟು ಸಹಾಯ ನೀಡಲು ನಾವು ಸದಾ ಸಿದ್ಧರಾಗಿದ್ದೇವೆ. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್, MBBS, MS (AIIMS), ONCO-SURGERY (IRCH, AIIMS)** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 18 ಜೂನ್, 2017ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ B.A.M.S., Msc, Yoga Therapy** ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 18 ಜೂನ್, 2017ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ MS, FNB, Spine Surgeon,** ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 25 ಜೂನ್, 2017ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್ M.D. (AYU)** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 25 ಜೂನ್, 2017ರಂದು ಸಾಯಂಕಾಲ 4 ಗಂಟೆಯಿಂದ.

## ಅಭಿನಂದನೆ

### ಕರ್ನಾಟಕದ ನಾಲ್ವರಿಗೆ

**ರಾಷ್ಟ್ರೀಯ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ**



ರತ್ನಮಾಲಾ ಪ್ರಕಾಶ್ | ದತ್ತಾತ್ರೇಯ ಅರಳಿಕಟ್ಟೆ | ಎಂ. ಮಂಜುನಾಥ್ | ಕೆ. ಗೋವಿಂದ ಭಟ್

ಹಿನ್ನೆಲೆ ಗಾಯಕಿ ರತ್ನಮಾಲಾ ಪ್ರಕಾಶ್ ಸೇರಿದಂತೆ ರಾಜ್ಯದ ನಾಲ್ವರು ಕಲಾವಿದರು ಕೇಂದ್ರ ಸಂಗೀತ ನಾಟಕ ಅಕಾಡೆಮಿಯ 2016ನೇ ಸಾಲಿನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಕರ್ನಾಟಕದ ಖ್ಯಾತ ಸುಗಮ ಸಂಗೀತ ಗಾಯಕಿ ರತ್ನಮಾಲಾ ಪ್ರಕಾಶ್, ಪ್ರಸಿದ್ಧ ವಯೋಲಿನ್ ವಾದಕ ಮೈಸೂರು ಎಂ. ಮಂಜುನಾಥ್, ಯಕ್ಷಗಾನ ಕಲಾವಿದ ಕೆ. ಗೋವಿಂದ ಭಟ್ ಮತ್ತು ತೊಗಲು ಗೊಂಬೆಯಾಟದ ಕಲಾವಿದ ದತ್ತಾತ್ರೇಯ ಅರಳಿಕಟ್ಟೆ ಅವರು ಈ ಪ್ರಶಸ್ತಿಗೆ ಭಾಜನರಾಗಿರುತ್ತಾರೆ.

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 9560653021/ 9560563203, 011–26109615 / 26104818

**ಅಭಿಮತ ಪ್ರಧಾನ ಸಂಪಾದಕರು**
ಬಾಲಕೃಷ್ಣ ನಾಯ್ಕ್ ಡಿ.

**ಅಭಿಮತ ಸಂಪಾದಕ ಮಂಡಳಿ**
ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 27 ಸಂಚಿಕೆ 9
ಜೂನ್ 2017

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಮುಖಪುಟ ವಿನ್ಯಾಸ
ವೀರೇಶ್ ಹೊಗೆಸೊಪ್ಪಿನವರ್

## ಸಂಪಾದಕರ ಟಿಪ್ಪಣಿಗಳು

# ಆದರ್ಶ ಸಂವಹನಕಾರ ಇನ್ನ ರಾಮಮೋಹನ ರಾಯರು



ಓರ್ವ ಸಂವಹನಕಾರ ಒಂದು ಸಂಸ್ಥೆಯ ವಕ್ತಾರನಾಗಿ ಅಥವಾ ಒಂದು ಮಾಧ್ಯಮದ ಪ್ರತಿನಿಧಿಯಾಗಿ ಯಾವಾಗಲೂ ನಿಷ್ಪಕ್ಷಪಾತಿಯಾಗಿರಬೇಕು. ಅಲ್ಲದೇ ಆ ವ್ಯಕ್ತಿಯು ನಿರ್ಭಿಡತೆಯಿಂದಿದ್ದು ಸಂಸ್ಥೆಯ ಅಥವಾ ದೇಶದ ರಾಜಕಾರಣದ ಒಳಸುಳಿಗಳಿಂದ ಹೊರಗುಳಿದುಕೊಂಡಿರಬೇಕು. ಸ್ವಾತಂತ್ರ್ಯದ ನಂತರ ಭಾರತದ ರಾಜಧಾನಿ ನವದೆಹಲಿಯ ಮಾಧ್ಯಮ ರಂಗದಲ್ಲಿ ಅಂತಹ ಒಂದು ಪರಂಪರೆಗೆ ಅಡಿಪಾಯವನ್ನು ಹಾಕಿ ಅದನ್ನು ಬೆಳೆಸುವಲ್ಲಿ ಅಪ್ರತಿಮವಾದ ಕೊಡುಗೆಯನ್ನು ನೀಡಿದವರು ಕನ್ನಡಿಗರಾದ ದೇಶದ ಪ್ರಮುಖ ಸಂವಹನಕಾರ ಹೆಚ್.ವೈ. ಶಾರದಾಪ್ರಸಾದ್ ಅವರು.

ಅವರ ನಂತರ ಅಷ್ಟೇ ನಿಷ್ಠೆ ಮತ್ತು ಬದ್ಧತೆಯಿಂದ ಆ ಪರಂಪರೆಯನ್ನು ಮುಂದುವರಿಸಿದವರು ಇನ್ನೋರ್ವ ಸಂವಹನಕಾರ ಮತ್ತು ಪತ್ರಕರ್ತ ಇನ್ನ ರಾಮಮೋಹನ ರಾವ್ ಅವರು. ಇದೇ ಮೇ ಹದಿಮೂರರಂದು ಎಂಭತ್ತಮೂರು ವಯಸ್ಸಿನ ರಾವ್ ಅವರು ಅಸುನೀಗಿದಾಗ ಅವರು ಏಶ್ಯನ್ ನ್ಯೂಸ್ ಇಂಟರ್‌ನ್ಯಾಷನಲ್‌ನ ಪ್ರಿಂಟ್ ವಿಭಾಗದ ಮುಖ್ಯ ಸಂಪಾದಕರಾಗಿದ್ದರು. ಅವರು ತಮ್ಮ ಇಪ್ಪತ್ತೊಂದನೆಯ ವಯಸ್ಸಿನಲ್ಲಿ ನವದೆಹಲಿಗೆ ಬಂದು 1956ರಿಂದ ಇಲ್ಲಿಯ ಮಾಧ್ಯಮ ರಂಗದಲ್ಲಿದ್ದರು. ಪ್ರೆಸ್ ಇನ್‌ಫಾರ್ಮೇಶನ್ ಬ್ಯೂರೋ ಸೇರಿದ ಅವರು ಆರಂಭದಿಂದಲೇ ದೇಶದ ಅಂದಿನ ಪ್ರಧಾನಿಯಾದ ಪಂಡಿತ್ ಜವಾಹರಲಾಲ್ ನೆಹರೂ ಅವರ ಪತ್ರಿಕಾಗೋಷ್ಠಿಗಳನ್ನು ನಡೆಸುವ ಹೊಣೆಗಾರಿಕೆಯನ್ನು ತಮ್ಮ ಹೆಗಲ ಮೇಲೆ ಹೊತ್ತಿದ್ದರು. ನಂತರ ಬದುಕಿನುದ್ದಕ್ಕೂ ನವದೆಹಲಿಯನ್ನೇ ತನ್ನ ಕಾರ್ಯಸ್ಥಾನವನ್ನಾಗಿಸಿ ಸುಮಾರು ಆರು ದಶಕಗಳಷ್ಟು ಕಾಲ ದೇಶದ ಸರಕಾರ, ರಕ್ಷಣಾಪಡೆ, ರಾಯಭಾರಿತ್ವಗಳ ಜತೆಗೆ ಮಾಧ್ಯಮದ ಕಣ್ಮಣಿಯಾಗಿ ಸುಂದರವಾದ ತುಂಬು ಬದುಕನ್ನು ಕಂಡರು. ಸದಾ ಹಸನ್ಮುಖರಾದ ಅವರು ನವಿರಾದ ಹಾಸ್ಯ, ಶಿಸ್ತು, ಸರಳತೆ ಮತ್ತು ವಿನಮ್ರತೆಯಿಂದ ಎಲ್ಲರನ್ನೂ ಆಕರ್ಷಿಸುತ್ತಿದ್ದರು.

ಉನ್ನತ ಶಿಕ್ಷಣವನ್ನು ಪಡೆದು ಉತ್ತಮ ಕೌಟುಂಬಿಕ ಹಿನ್ನಲೆಯಿಂದ ಬಂದ ರಾಮಮೋಹನ ರಾವ್ ಅವರು ವೃತ್ತಿಯಲ್ಲಿ ಮೇರು ಶಿಖರವನ್ನು ಏರಿದವರು. ಸ್ವಾತಂತ್ರ್ಯದ ನಂತರ ಭಾರತವು ಕಿರುಹೆಜ್ಜೆಗಳನ್ನಿಡುತ್ತಾ ಅಭಿವೃದ್ಧಿ ಹೊಂದುವ ಸಂದರ್ಭದಲ್ಲಿ ರಾಷ್ಟ್ರಮಟ್ಟದ ಕಾರ್ಯನೀತಿಗಳು ಸರಕಾರದಲ್ಲಿ ರೂಪುಗೊಳ್ಳುವಾಗ ಅದಕ್ಕೆ ಸಾಕ್ಷಿಯಾದವರು. ಜಾಗತಿಕವಾಗಿ ಉದ್ಯಮ, ಕೃಷಿ, ವಿಜ್ಞಾನರಂಗಗಳಲ್ಲಿ ಕ್ರಾಂತಿಕಾರಿ ಅಭಿವೃದ್ಧಿಗಳು ಸಂಭವಿಸುತ್ತಿರುವಾಗ ಭಾರತವು ಅದಕ್ಕೆ ಪ್ರತಿಕ್ರಿಯಿಸುವುದನ್ನು ಜನಸಾಮಾನ್ಯರ ತನಕ ತಲುಪುವಂತೆ ನೋಡಿಕೊಂಡ ಸಂವಹನಕಾರರು ಅವರು. ದೇಶದ ಸೈನಿಕರು ಯುದ್ಧಗಳಲ್ಲಿ ಹೋರಾಡುತ್ತಿದ್ದಾಗ ದೇಶದ ನಾಯಕರು ಕೈಗೊಳ್ಳುತ್ತಿದ್ದ ತಂತ್ರಗಾರಿಕೆಗಳನ್ನು ಸ್ಪಷ್ಟವಾಗಿ ತಿಳಿದು ಅವುಗಳ ಕುರಿತು ಮಾಧ್ಯಮಗಳಿಗೆ ಯಾವ ರೀತಿಯಲ್ಲಿ ವಿವರಿಸಬೇಕೆನ್ನುವ ವಿಶಿಷ್ಟ ಕೌಶಲ್ಯವನ್ನು ಅವರು ಕರಗತ ಮಾಡಿಕೊಂಡಿದ್ದರು. ನಂತರದ ದಿನಗಳಲ್ಲಿ ದೇಶದ ಪ್ರಧಾನ ಮಂತ್ರಿಗಳ ಮಾಧ್ಯಮ ಸಲಹೆಗಾರರಾಗಿ ಅವರು ಬಹಳಷ್ಟು ಸೂಕ್ಷ್ಮತೆಯಿಂದ ಕಾರ್ಯ ನಿರ್ವಹಿಸಿ ತಮ್ಮ ವೃತ್ತಿ ನೈಪುಣ್ಯದಿಂದಾಗಿ ಆಡಳಿತಗಾರರ ಮತ್ತು ಮಾಧ್ಯಮದವರ ಮೆಚ್ಚುಗೆ ಗಳಿಸಿದರು. ಅವರು ವೃತ್ತಿಯಲ್ಲಿ ಗಳಿಸಿದ ಗೌರವವನ್ನು ಕೊನೆಗಾಲದವರೆಗೂ ರಕ್ಷಿಸಿದ್ದರು.

ದೇಶದ ರಾಜಧಾನಿಯಲ್ಲಿ ಅತ್ಯುನ್ನತ ಹುದ್ದೆಗಳನ್ನು ಹೊಂದಿರುವ ಅನೇಕ ಕನ್ನಡಿಗರು ಇದ್ದಾರೆ. ಅವರೆಲ್ಲರೂ ತಮ್ಮ ತಮ್ಮ ವೃತ್ತಿ ಬದುಕಿನಲ್ಲಿಯೇ ತೊಡಗಿಕೊಂಡು ದೇಶಕ್ಕಾಗಿ ಮತ್ತು ತಾವು ಕೆಲಸ ಮಾಡುತ್ತಿರುವ ಸಂಸ್ಥೆಗಳಿಗಾಗಿ ದುಡಿಯುತ್ತಾರೆ. ಅವರಲ್ಲಿ ಬಹಳಷ್ಟು ಕಡಿಮೆ ಜನರು ತಮ್ಮ ಜನ, ನಾಡು, ನುಡಿ ಮತ್ತು ಸಂಸ್ಕೃತಿಗಾಗಿ ತಮ್ಮ ಸಮಯವನ್ನು ನೀಡುತ್ತಾರೆ. ಆದರೆ ಉನ್ನತ ಹುದ್ದೆಯನ್ನು ಅಲಂಕರಿಸಿದರೂ ರಾಮಮೋಹನ ರಾಯರು ತಮ್ಮ ನಾಡಿನ ಜನರಿಗೆ ಮತ್ತು ನಾಡಿನ ಭಾಷೆಗಳಿಗೆ ನೀಡಿದ ಕೊಡುಗೆ ಅಪೂರ್ವವಾದುದು. ಸರಕಾರದ ಸಂವಹನಕಾರರಾಗಿ ಇಲ್ಲಿ ಬೇರೆ ಬೇರೆ ಭಾಷೆಯ ಮಾಧ್ಯಮಗಳಲ್ಲಿ ಕೆಲಸ ಮಾಡುವ ಕನ್ನಡದ ಪತ್ರಕರ್ತರಿಗೆ ಅವರು ಬಹಳಷ್ಟು ಸುದ್ದಿಗಳ ಮೂಲವಾಗಿದ್ದರು. ತಮ್ಮ ನಾಡಿನ ಹಲವಾರು ಪ್ರತಿಷ್ಠಿತ ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ದೆಹಲಿಯಲ್ಲಿ ಮುಖ್ಯವಾದ ಕೆಲಸಗಳನ್ನು ಸುಲಲಿತವಾಗಿ ಮಾಡಲು ಸರಕಾರದಲ್ಲಿ ತಮ್ಮ ಸಂಪರ್ಕದ ಪ್ರಯೋಜನವನ್ನು ನೀಡಿದ್ದರು. ತಮ್ಮ ಕ್ಷೇತ್ರಗಳಿಂದ ಚುನಾಯಿತರಾಗಿ ದೆಹಲಿಗೆ ಬಂದ ಬಹಳಷ್ಟು ಸಂಸತ್ ಸದಸ್ಯರಿಗೆ ರಾಮಮೋಹನ ರಾಯರು ಮಾರ್ಗದರ್ಶಕರಾಗಿದ್ದರು.

ದೆಹಲಿ ಕರ್ನಾಟಕ ಸಂಘಕ್ಕೆ ರಾಮಮೋಹನ ರಾಯರು ನೀಡಿದ ಕೊಡುಗೆಯನ್ನು ಮರೆಯಲಾಗದು. ಅವರು ಸಂಘದ ಉಪಾಧ್ಯಕ್ಷ ಮತ್ತು ಅಧ್ಯಕ್ಷ ಹುದ್ದೆಗಳನ್ನು ಅಲಂಕರಿಸಿ ಅಂದಿನ ಕಾಲದಲ್ಲಿ ಸಂಘವು ಎದುರಿಸುತ್ತಿದ್ದ ಅತ್ಯಂತ ಜಟಿಲವಾದ ಸಮಸ್ಯೆಗಳನ್ನು ಎಲ್ಲಾ ಸದಸ್ಯರ ಒಮ್ಮತದಿಂದ ನಿರಾಳವಾಗಿ ಪರಿಹರಿಸುತ್ತಿದ್ದರು. ಸಂಘದೊಳಗಿನ ಒಳರಾಜಕೀಯಗಳ ಕುರಿತು ನಿಖರವಾಗಿ ಅರಿತಿದ್ದರೂ ಅವರು ತಾವು ನಂಬಿಕೊಂಡಿದ್ದ ಮೌಲ್ಯಗಳನ್ನು ಬಲಿಗೊಡಲಿಲ್ಲ. ಅವರಿಗೆ ಸಂಘ ಮತ್ತು ಅದರ ಎಲ್ಲಾ ಸದಸ್ಯರು ಮುಖ್ಯವಾಗಿದ್ದರು. ನಂತರ ಕಟ್ಟಡ ಸಮಿತಿಯ ಅಧ್ಯಕ್ಷರಾಗಿ ಅವರು ಅಂದಿನ ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಎಲ್ಲಾ ಕಾರ್ಯಕಾರಿ ಸಮಿತಿಗೆ ನೀಡಿದ ಬೆಂಬಲ ಅವರಿಂದ ಮಾತ್ರವೇ ಸಾಧ್ಯವಾಗಿತ್ತು. ಅವರ ಪರಿಶುದ್ಧವಾದ ವ್ಯಕ್ತಿತ್ವವೇ ಬಹಳಷ್ಟು ಕೆಲಸಗಳನ್ನು ಸಾಂಗವಾಗಿ ಮಾಡಿಸಿತ್ತು.

ಓರ್ವ ಆದರ್ಶ ಸಂವಹನಕಾರರಾಗಿ ಮತ್ತು ಓರ್ವ ಆದರ್ಶ ಹೊರನಾಡ ಕನ್ನಡಿಗರಾಗಿ ಇನ್ನ ರಾಮಮೋಹನ ರಾಯರು ನಮಗೆಲ್ಲರಿಗೂ ಸ್ಫೂರ್ತಿದಾಯಕರು. ಅವರು ಬದುಕಿನಲ್ಲಿ ಪಾಲಿಸಿದ ಕೆಲವೊಂದು ಮೌಲ್ಯಗಳನ್ನಾದರೂ ನಾವೂ ಪಾಲಿಸುವಂತಾದರೆ ಅದುವೇ ನಾವು ಅವರಿಗೆ ನೀಡಬಹುದಾದ ಬಹುದೊಡ್ಡ ಶ್ರದ್ಧಾಂಜಲಿ. ಅ

ಬಾಲಕೃಷ್ಣ ನಾಯ್ಕ್ ಡಿ.

# ಸಂಘದ ಆರ್ಟ್ ಗ್ಯಾಲರಿಯಲ್ಲಿ ಕಲಾಕೃತಿಗಳ ಪ್ರದರ್ಶನ







## ಸದಲಗೆ ಮತ್ತು ಬಿರಾದಾರರ ಚಿತ್ರಕಲೆ

ಉತ್ತರ ಕರ್ನಾಟಕದ ಬಾಲು ಸದಲಗೆ, ಮೀನಾಕ್ಷಿ ಸದಲಗೆ ಹಾಗೂ ಸತೀಶ್ ಬಿರಾದಾರ ಅವರ ಕಲಾಕೃತಿಗಳ ಪ್ರದರ್ಶನವು ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಇದೇ ಮೇ 6ರಿಂದ ಪ್ರದರ್ಶನಗೊಂಡಿತು. ಪ್ರದರ್ಶನವನ್ನು ಉದ್ಘಾಟಿಸಿದ ಹೆಸರಾಂತ ಕಲಾವಿದೆ ಅನು ನಾಯಕ್ ಅವರು ಮಾತಾಡುತ್ತಾ ಇಂದಿನ ಕಲಾವಿದರು ಆಧುನಿಕ ಕಲೆಗೆ ಮಾರು ಹೋಗುತ್ತಿರುವ ಈ ದಿನಗಳಲ್ಲಿ 'ಪ್ರಕೃತಿ ಚಿತ್ರಕಲೆ', 'ಸ್ಥಿರ ಚಿತ್ರಣ'ವನ್ನು ಕೈಗೆತ್ತಿಕೊಂಡು ಜಲವರ್ಣ ಹಾಗೂ ತೈಲವರ್ಣದ ಉತ್ತಮ ಕಲಾಕೃತಿಗಳನ್ನು ರಚಿಸಿ ಪ್ರದರ್ಶಿಸುವುದು ಅಭಿನಂದನಾರ್ಹವಾಗಿದೆ ಎಂದರು. ಇದೇ ಸಂದರ್ಭದಲ್ಲಿ ಉಪಸ್ಥಿತರಿದ್ದ ಅತಿಥಿ ದೆಹಲಿಯ ಆರ್ಟ್ ಕ್ಯುರೇಟರ್ ಮತ್ತು ಪ್ರಮೋಟರ್ ಶೈಲ್ ಸಿಂಗ್ ಅವರು ದೆಹಲಿ ಕರ್ನಾಟಕ ಸಂಘವು ಆರ್ಟ್ ಗ್ಯಾಲರಿ ನಿರ್ಮಿಸಿ ಕನ್ನಡದ ಕಲಾವಿದರನ್ನು ದೆಹಲಿ ಹಾಗೂ ವಿದೇಶಿಯರಿಗೂ ಪರಿಚಯಿಸುತ್ತಿರುವ ಕಾರ್ಯ ಶ್ಲಾಘನೀಯ ಎಂದರು. ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ದೆಹಲಿ ಕರ್ನಾಟಕ ಸಂಘದ ಜಂಟಿ ಕಾರ್ಯದರ್ಶಿ ಶ್ರೀಮತಿ ಜಮುನಾ ಸಿ. ಮಠದ, ಕಲಾವಿದರಾದ ಸುಧೀರ್ ಫಡ್ನೀಸ್, ಚೆನ್ನು ಎಸ್. ಮಠದ, ಹಾಗೂ ರಂಗಕಲಾವಿದ ಶಿವಾನಂದ ಇಂಗಳೇಶ್ವರ ಹಾಗೂ ಇನ್ನಿತರ ಸದಸ್ಯರು ಉಪಸ್ಥಿತರಿದ್ದರು.

## ಕೃಷ್ಣ ಕೆ.ಎಂ. ಅವರ ಚಿತ್ರಕಲೆ


ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಕರ್ನಾಟಕದ ಕಲಾವಿದರಾದ ಕೃಷ್ಣ ಕೆ.ಎಂ. ಅವರು ಮೇ 1 ರಿಂದ 3ರವರೆಗೆ ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಿದ್ದರು. ಈ ಮೂರು ದಿನಗಳ ಚಿತ್ರಕಲಾ ಪ್ರದರ್ಶನವನ್ನು ರಾಷ್ಟ್ರೀಯ ಲಲಿತಕಲಾ ಅಕಾಡೆಮಿಯ ಆಡಳಿತಾಧಿಕಾರಿಗಳಾದ ಚಿ.ಸು. ಕೃಷ್ಣ ಸೆಟ್ಟಿಯವರು ಉದ್ಘಾಟಿಸಿದರು. ಅವರು ಈ ಸಂದರ್ಭದಲ್ಲಿ ಮಾತನಾಡುತ್ತ ಕಲಾವಿದ ಕೃಷ್ಣ ಅವರು ತಮ್ಮದೇ ಆದ ಶೈಲಿಯಲ್ಲಿ ಕಲಾಕೃತಿಗಳನ್ನು ದೆಹಲಿಯಲ್ಲಿ ಪ್ರದರ್ಶಿಸುವುದು ಹೆಮ್ಮೆಯ ವಿಷಯವಾಗಿದೆ ಎಂದರು. ದೆಹಲಿಯ ಖ್ಯಾತ ಕಲಾವಿದರಾದ ಸುಧೀರ್ ಫಡ್ನೀಸ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ರಾಧಾಕೃಷ್ಣ ಅವರು ಉಪಸ್ಥಿತರಿದ್ದರು.



## ಅಂಗಡಿ, ತರಬರ ಮತ್ತು ಪತ್ತಾರ ಅವರ ಚಿತ್ರಕಲೆ

ಕರ್ನಾಟಕದ ಕಲಾವಿದರಾದ ಪ್ರವೀಣ ಎಸ್. ಅಂಗಡಿ ಬೆಳಗಾವಿ, ಸುಶೀಲ ತರಬರ ಬೆಳಗಾವಿ ಹಾಗೂ ನವೀನ ಪತ್ತಾರ, ಗದಗ ತಮ್ಮ ಕಲಾ ಪ್ರದರ್ಶನವನ್ನು ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಇದೇ ಮೇ 17 ರಂದು ಏರ್ಪಡಿಸಿದ್ದರು. ರಾಷ್ಟ್ರೀಯ ಲಲಿತಕಲಾ ಅಕಾಡೆಮಿಯ ಆಡಳಿತಾಧಿಕಾರಿ ಚಿ.ಸು. ಕೃಷ್ಣ ಸೆಟ್ಟಿಯವರು ಪ್ರದರ್ಶನವನ್ನು ಉದ್ಘಾಟಿಸಿದರು. ನವದೆಹಲಿಯ ಖ್ಯಾತ ಕಲಾವಿದರಾದ ಸುಧೀರ್ ಫಡ್ನೀಸ್ ಅವರು ಮುಖ್ಯ ಅತಿಥಿಯಾಗಿ ಆಗಮಿಸಿ ಕಲಾವಿದರು ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಚಿತ್ರಕಲಾ ಪ್ರದರ್ಶನ ಮಾಡಿ ಹೆಸರು ಮಾಡಲಿ ಎಂದು ಹಾರೈಸಿದರು. ಮೂವರು ಕಲಾವಿದರ ಚಿತ್ರಗಳು ವೈವಿಧ್ಯಮಯವಾಗಿದ್ದು ತಮ್ಮದೇ ಆದ ಶೈಲಿಯಲ್ಲಿ ಸುಂದರವಾದ ಕಲಾಕೃತಿಗಳು ನಿರ್ಮಾಣಗೊಂಡು ವೀಕ್ಷಕರು ಅವರವರ ಭಾವಕ್ಕೆ ತಕ್ಕಂತೆ ಚಿತ್ರಗಳನ್ನು ಅರ್ಥೈಸಿಕೊಂಡರು.





## ವಿಜಯಲಕ್ಷ್ಮಿ ವಿ. ಬಿರಾದಾರರ ಚಿತ್ರಕಲೆ

ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಇದೇ ಮೇ 26 ರಿಂದ 30ರವರೆಗೆ ಕರ್ನಾಟಕದ ಕಲಾವಿದೆ ವಿಜಯಲಕ್ಷ್ಮೀ ವಿ. ಬಿರಾದಾರ ಅವರು ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಿದ್ದರು. ಈ ಚಿತ್ರಕಲಾ ಪ್ರದರ್ಶನವನ್ನು ರಾಷ್ಟ್ರೀಯ ಲಲಿತಕಲಾ ಅಕಾಡೆಮಿಯ ಆಡಳಿತಾಧಿಕಾರಿಗಳಾದ ಚಿ.ಸು. ಕೃಷ್ಣ ಸೆಟ್ಟಿಯವರು ಉದ್ಘಾಟಿಸಿದರು. ಪ್ರಸಿದ್ಧ ಚಿತ್ರಕಲಾವಿದೆ ಶ್ರೀಮತಿ ದೇಬಿ ಮಿತ್ರ ಚಕ್ರವರ್ತಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಚಿತ್ರಕಲಾ ಪ್ರದರ್ಶನವನ್ನು ವೀಕ್ಷಿಸಿ ಪ್ರಶಂಸೆಯ ನುಡಿಗಳನ್ನಾಡಿ ಕಲಾವಿದೆಯನ್ನು ಪ್ರೋತ್ಸಾಹಿಸಿದರು. ಅ

**ಅಭಿಮತ ವರದಿ**



# ಕರ್ನಾಟಕ ಬ್ಯಾಂಕಿನ ಮಹಾಬಲೇಶ್ವರ ಭಟ್ ಅವರಿಗೆ ಅಭಿನಂದನೆ

ಕರ್ನಾಟಕ ಬ್ಯಾಂಕಿನ ನೂತನ ಆಡಳಿತ ನಿರ್ದೇಶಕ ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ ಇತ್ತೀಚೆಗೆ ಅಧಿಕಾರ ವಹಿಸಿಕೊಂಡ ಶ್ರೀ ಮಹಾಬಲೇಶ್ವರ ಭಟ್ ಎಂ.ಎಸ್. ಅವರನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ಸಂಘದ ಸಭಾಂಗಣದಲ್ಲಿ ಇದೇ ಮೇ 20ರಂದು ಅಭಿನಂದಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ವಹಿಸಿದ್ದರು. ರಾಜ್ಯ ಸಭಾ ಸದಸ್ಯರಾದ ಶ್ರೀ ಆಸ್ಕರ್ ಫರ್ನಾಂಡಿಸ್ ಅವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಶ್ರೀ ಆಸ್ಕರ್ ಫರ್ನಾಂಡಿಸ್ ಅವರು ಶ್ರೀ ಮಹಾಬಲೇಶ್ವರ ಭಟ್ ಅವರು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮಾಡುತ್ತಿರುವ ಮಹತ್ತರ ಸೇವೆಯನ್ನು ಸ್ಮರಿಸುವುದರ ಜೊತೆಗೆ ದೆಹಲಿ ಕರ್ನಾಟಕ ಸಂಘಕ್ಕಾಗಿ ಅದರಲ್ಲೂ ಮುಖ್ಯವಾಗಿ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣ ಕಾರ್ಯದಲ್ಲಿ ಬೃಹತ್ ಮೊತ್ತದ ಸಾಲವನ್ನು ನೀಡಿ ಸಹಕರಿಸಿದ್ದನ್ನು ಪ್ರಶಂಸಿಸಿದರು.

ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತನಾಡುತ್ತ, ಶ್ರೀ ಮಹಾಬಲೇಶ್ವರ ಭಟ್ಟರು, 'ಒಬ್ಬ ತುಂಬಾ ಕಟ್ಟುನಿಟ್ಟಿನ ಅಧಿಕಾರಿಯಾಗಿದ್ದರೂ ಕೂಡ ಜೊತೆಯಲ್ಲೇ ಒಬ್ಬ ಅಷ್ಟೇ ಒಳ್ಳೆಯ ಮಾನವೀಯತೆ ಹೊಂದಿದ ವ್ಯಕ್ತಿ ಕೂಡಾ ಆಗಿದ್ದಾರೆ' ಎಂದರು. ದೆಹಲಿ ಕರ್ನಾಟಕ ಸಂಘದ ಬೆಳವಣಿಗೆಗೆ ಕರ್ಣಾಟಕ ಬ್ಯಾಂಕಿನ ಸಹಕಾರ ಮಹತ್ತರವಾದುದು. ಸಂಘವು ಸುಮಾರು 12 ವರ್ಷಗಳ ಹಿಂದೆ ತನ್ನ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣದ ತಯಾರಿಯಲ್ಲಿ ತೊಡಗಿದ್ದಾಗ ಅದಕ್ಕೆ ಅತ್ಯಗತ್ಯವಾದ ಹಣಕಾಸಿನ ಸಾಲರೂಪದ ನೆರವನ್ನು ಒದಗಿಸಿಕೊಡುವಲ್ಲಿ ಮಹತ್ವದ ಪಾತ್ರ ವಹಿಸಿದ ಶ್ರೀ ಮಹಾಬಲೇಶ್ವರ ಭಟ್ ಅವರು ಅಂದಿನಿಂದಲೂ ಸತತವಾಗಿ ಕರ್ನಾಟಕ ಸಂಘದ ವಿವಿಧ ಕಾರ್ಯಕ್ರಮಗಳಿಗೆ ಒಂದಲ್ಲೊಂದು ರೀತಿಯಲ್ಲಿ ಬೆಂಬಲಿಸುತ್ತಲೇ ಬಂದಿರುತ್ತಾರೆ ಎಂದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಶ್ರೀ ಮಹಾಬಲೇಶ್ವರ ಭಟ್ಟರು, ತಮ್ಮ ಸಂಪೂರ್ಣ ವೃತ್ತಿ ಜೀವನದಲ್ಲಿ ಅದರಲ್ಲೂ ಮುಖ್ಯವಾಗಿ ದೆಹಲಿ ಮತ್ತು ಉತ್ತರ ಭಾರತದಲ್ಲಿ ತಾವು ಸಾಧಿಸಿದ ಯಶಸ್ಸಿನ ಬಗ್ಗೆ ಮಾತಾಡಿದರು. ತಮ್ಮ ಸಹೋದ್ಯೋಗಿಗಳು, ಹಿರಿಯ ಅಧಿಕಾರಿಗಳು ಹಾಗೂ ಮಡದಿ ಮಕ್ಕಳು ಸೇರಿದಂತೆ ತಮ್ಮನ್ನು ಸದಾ ಹುರಿದುಂಬಿಸಿ ಕಾರ್ಯಪ್ರವೃತ್ತರಾಗಲು




## ಮಹಾಬಲೇಶ್ವರ ಭಟ್ ಎಂ.ಎಸ್. ವ್ಯಕ್ತಿತ್ವ

ಮಲೆನಾಡಿನ ಚಿಕ್ಕಮಗಳೂರು ಜಿಲ್ಲೆಯ ತೋಟದೂರು–ಮಾವಿನ ಕುಡಿಗೆಯ ಮೂಲದವರಾದ ಶ್ರೀ ಮಹಾಬಲೇಶ್ವರ ಎಂ.ಎಸ್. ಇವರು ಶ್ರೀ ಸುಬ್ರಮಣ್ಯ ಭಟ್ಟ ಹಾಗೂ ಶ್ರೀಮತಿ ಶಾರದಮ್ಮ ಇವರ ಸುಪುತ್ರ. ಅವರು ತಮ್ಮ ಪ್ರಾಥಮಿಕ ಶಿಕ್ಷಣ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಬಸರಿಕಟ್ಟೆಯ ಸರಕಾರಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆ ಹಾಗೂ ಪ್ರೌಢ ಶಿಕ್ಷಣವನ್ನು ಬಸರಿಕಟ್ಟೆಯ ಶ್ರೀ ಸದ್ಗುರು ಪ್ರೌಢಶಾಲೆಯಲ್ಲಿ ಪೂರೈಸಿದರು. ತಮ್ಮ ಪದವಿ ಪೂರ್ವ ಶಿಕ್ಷಣವನ್ನು ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ಪಡೆದ ಇವರು ಬೆಂಗಳೂರಿನ ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯದಲ್ಲಿ ಪದವಿ ಹಾಗೂ ಕೃಷಿ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ, 'ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಬ್ಯಾಂಕರ್ಸ್'ನ ಸರ್ಟಿಫೈಡ್ ಅಸೋಸಿಯೇಟ್, ಮಂಗಳೂರಿನ ಸೈಂಟ್ ಅಲೋಶಿಯಸ್ ಕಾಲೇಜಿನಿಂದ ಬಿಸಿನೆಸ್ ಮ್ಯಾನೇಜಮೆಂಟ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮ ಪದವಿ ಪಡೆದಿರುತ್ತಾರೆ. ಅ

ಕಾರಣಕರ್ತರಾದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು. ಇತ್ತೀಚೆಗೆ ಅಗಲಿದ ಐ. ರಾಮಮೋಹನ ರಾವ್, ಸಿಂಡಿಕೇಟ್ ಬ್ಯಾಂಕಿನ ಶ್ರೀ ದೇವಾನಂದ ಉಪಾಧ್ಯಾಯ, ಸಂಘದ ಮಾಜಿ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಮೊದಲಾದ ಗಣ್ಯರನ್ನು ಈ ಸಂದರ್ಭದಲ್ಲಿ ನೆನಪಿಸಿಕೊಂಡರು. "ಇಂದು ಕನ್ನಡಿಗನಾಗಿ ನಾನು ನನ್ನ ಬ್ಯಾಂಕಿನ ಕರ್ತವ್ಯವನ್ನು ನಿರ್ವಹಿಸುತ್ತಾ ನನ್ನಿಂದಾದ ಒಂದು ಅಳಿಲು ಸೇವೆಯನ್ನು ದೆಹಲಿ ಕರ್ನಾಟಕ ಸಂಘಕ್ಕೆ ಸಲ್ಲಿಸಿದ್ದನ್ನು ಗುರುತಿಸಿ ನನ್ನನ್ನು ಇಷ್ಟೊಂದು ಪ್ರೀತಿ–ಗೌರವಗಳಿಂದ ನೀವು ನನ್ನನ್ನು ಅಭಿನಂದಿಸಿದ್ದೀರಿ. ಈ ಅಭಿನಂದನೆ ಕರ್ನಾಟಕ ಬ್ಯಾಂಕಿನ ನನ್ನ ಸಮಸ್ತ ಸಹದ್ಯೋಗಿಗಳಿಗೆ ಸೇರಿದ್ದು" ಎಂದು ನುಡಿದರು.

ಶ್ರೀ ಮಹಾಬಲೇಶ್ವರ ಭಟ್ ಅವರ ಸಹಪಾಠಿ ಹಾಗೂ ಸಹೋದ್ಯೋಗಿಯಾಗಿರುವ ಶ್ರೀ ರಂಗನಾಥ್, ಡಿ.ಜಿ.ಎಂ. ಕರ್ನಾಟಕ ಬ್ಯಾಂಕ್, ದೆಹಲಿ ವಲಯ ಅವರು ಮಾತನಾಡುತ್ತ ಶ್ರೀ ಮಹಾಬಲೇಶ್ವರ ಭಟ್ ಅವರು ಯಾವುದೇ ಒಂದು ಕೆಲಸವನ್ನು ಮಾಡಬೇಕಾದರೆ ಅದರ ಸಂಪೂರ್ಣ ತಯಾರಿ ಮಾಡಿಕೊಂಡು ಯೋಜನೆಯಂತೆ ಹಂತ ಹಂತವಾಗಿ ಕಾರ್ಯನಿರ್ವಹಿಸುತ್ತಾ ಅಂತಿಮ ಗುರಿಯನ್ನು ತಲುಪಿಯೇ ತಲುಪುತ್ತಾರೆ. ಅವರ ಎಲ್ಲಾ ಕಾರ್ಯಯೋಜನೆಗಳು ಯಶಸ್ವಿಯಾಗಿವೆ. ಅಂತೆಯೇ ಮುಂದೆಯೂ ಕೂಡಾ ಅವರು ಹಾಕಿಕೊಂಡಿರುವ ಬ್ಯಾಂಕಿನ ಎಲ್ಲಾ ಯೋಜನೆಗಳು ಯಶಸ್ವಿಯಾಗಲಿ ಎಂದು ಆಶಿಸಿದರು.

ಸಂಘದ ಪರಂಪರೆಯಂತೆ ಇದೇ ಸಂದರ್ಭದಲ್ಲಿ ಸಂಘದ ಆವರಣದಲ್ಲಿರುವ ಕರ್ನಾಟಕ ಬ್ಯಾಂಕ್ ಶಾಖೆಯಿಂದ ವರ್ಗವಾಗಿ ಹೋಗುತ್ತಿರುವ ಶ್ರೀ ಹರಿಚರಣ್ ಕಾಮತ್, ಮತ್ತು ಹೊಸದಾಗಿ ಬರುತ್ತಿರುವ ಶ್ರೀ ಲಕ್ಷ್ಮೀನಾರಾಯಣ ರಾವ್ ಅವರನ್ನು ಈ ಸಂದರ್ಭದಲ್ಲಿ ಪುಷ್ಪಗುಚ್ಛ ನೀಡಿ ಅಭಿನಂದಿಸಲಾಯಿತು.

ಕಾರ್ಯಕ್ರಮ ಆರಂಭದಲ್ಲಿ ಕು. ಆದಿಸ್ವರೂಪಳಿಂದ 'ಬೀಟ್ ಬಾಕ್ಸ್ ಮ್ಯೂಸಿಕ್'ನ ಮಿಮಿಕ್ರಿ ನಡೆಯಿತು. ಸ್ವರೂಪ ಅಧ್ಯಯನ ಕೇಂದ್ರ, ಮಂಗಳೂರಿನ ನಿರ್ದೇಶಕರಾದ ಶ್ರೀ ಗೋಪಾ ಅಡ್ಕರ್ ಮತ್ತು ಸುಮಾ ಅಡ್ಕರ್ ಅವರ ಸುಪುತ್ರಿಯಾದ ಆದಿಸ್ವರೂಪಳು ಆರನೇ ತರಗತಿಯಲ್ಲಿ ಓದುತ್ತಿರುವ ಪುಟಾಣಿಯಾಗಿದ್ದು ಅಪೂರ್ವ ಪ್ರತಿಭೆ ಹೊಂದಿರುತ್ತಾಳೆ. ಸ್ವರೂಪ ಅಧ್ಯಯನ ಕೇಂದ್ರವು ಆಧುನಿಕ ಶಿಕ್ಷಣ ಪದ್ಧತಿಯ ಸುಧಾರಣೆಯ ಕುರಿತಂತೆ ಸಂಶೋಧನೆಯಲ್ಲಿ ತೊಡಗಿದ್ದು ಕಳೆದ ಆರು ವರ್ಷಗಳಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಜಾಥಾಗಳನ್ನು ಏರ್ಪಡಿಸಿ ಇಂದಿನ ಶಿಕ್ಷಣ ಪದ್ಧತಿಯ ಕುಂದುಕೊರತೆಗಳ ಬಗ್ಗೆ ಜನರಲ್ಲಿ ಜಾಗೃತಿಯನ್ನು ಮೂಡಿಸಲು ತೊಡಗಿಕೊಂಡಿದೆ. ಇದೇ ಸಂದರ್ಭದಲ್ಲಿ ಕು. ಆದಿ ಸ್ವರೂಪಳು ಸಂಘದ ಅಧ್ಯಕ್ಷ ಶ್ರೀ ವಸಂತ ಬೆಳ್ಳಾರೆಯವರ ಒಂದು ಚಿತ್ರವನ್ನು ಸ್ಥಳದಲ್ಲೇ ಬರೆದು ಪ್ರಸ್ತುತಪಡಿಸಿದರೆ ಶ್ರೀ ಗೋಪಾಡ್ಕರ್ ಅವರು ತಮ್ಮ ಉಗುರಿನಿಂದ ಶ್ರೀ ಮಹಾಬಲೇಶ್ವರ ಭಟ್ ಅವರ ಚಿತ್ರವೊಂದನ್ನು ಬಿಡಿಸಿ ಅವರಿಗೆ ನೀಡಿದರು.

ಕಾರ್ಯಕ್ರಮ ಕೊನೆಯಲ್ಲಿ ಕಲಾಂಜಲಿ ನಾಟ್ಯ ಕೇಂದ್ರ, ಮಂಗಳೂರು ಇದರ ಕಲಾವಿದರಿಂದ 'ವಿಶ್ವರೂಪ' ನೃತ್ಯರೂಪಕ ನಡೆಯಿತು. ವಿದೂಷಿ ಅಂಜಲಿ ವಿಲ್ಸನ್ ವಾಜ್ ಅವರ ನಿರ್ದೇಶನದಲ್ಲಿ ಭರತನಾಟ್ಯ, ಕಥಕ್, ಕೂಚುಪುಡಿ ಮತ್ತು ಒರಿಯಾ ನೃತ್ಯಗಳ ಸಮ್ಮಿಶ್ರಣವನ್ನು ಒಳಗೊಂಡ ಅಮೋಘವಾದ ಶಾಸ್ತ್ರೀಯ ನೃತ್ಯ ಪ್ರದರ್ಶನ ನೆರೆದ ಸಭಿಕರ ಮನವನ್ನು ಸೂರೆಗೊಂಡಿತು. ಕಲಾವಿದರನ್ನು ಶ್ರೀ ಆಸ್ಕರ್ ಫರ್ನಾಂಡೀಸ್ ಅವರು ಸಂಘದ ಸ್ಮರಣಿಕೆ ಮತ್ತು ಹೂಗುಚ್ಛ ನೀಡಿ ಅಭಿನಂದಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರಾದ ಶ್ರೀ ಸಖಾರಾಮ ಉಪ್ಪೂರು ಅವರು ಸ್ವಾಗತಿಸಿ ಕಾರ್ಯಕ್ರಮವನ್ನು ನಿರೂಪಿಸಿ ಕೊನೆಯಲ್ಲಿ ಎಲ್ಲರಿಗೂ ಧನ್ಯವಾದ ಸಮರ್ಪಿಸಿದರು.

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರುಗಳು, ದೆಹಲಿಯಲ್ಲಿರುವ ಕರ್ನಾಟಕ ಬ್ಯಾಂಕಿನ ಸಹದ್ಯೋಗಿಗಳು ಹಾಗೂ ದೆಹಲಿ, ಗುರ್‌ಗಾಂವ್ ಮತ್ತು ನೋಯ್ಡಾದಿಂದ ಆಗಮಿಸಿದ ನೂರಾರು ಮಂದಿ ದೆಹಲಿ ಕನ್ನಡಿಗರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಅ

***ಸಖಾರಾಮ ಉಪ್ಪೂರು***






## ಮಹಾಬಲೇಶ್ವರ ಭಟ್ ಎಂ.ಎಸ್. ಸಾಧನೆ



ಶ್ರೀ ಮಹಾಬಲೇಶ್ವರ ಭಟ್ ಎಂ.ಎಸ್. ಅವರು ಕರ್ನಾಟಕ ಬ್ಯಾಂಕಿನಲ್ಲಿ ಸುಮಾರು 32 ವರ್ಷಗಳಿಂದ ಸೇವೆಯಲ್ಲಿದ್ದು ಬ್ಯಾಂಕಿಂಗ್ ಹಾಗೂ ಆಡಳಿತ ಕ್ಷೇತ್ರಗಳಲ್ಲಿ ಉತ್ತಮ ಅನುಭವವನ್ನು ಹೊಂದಿದ್ದಾರೆ. ತಮ್ಮ ವೃತ್ತಿ ಜೀವನವನ್ನು ಬೆಂಗಳೂರಿನ ಯುನಿವರ್ಸಿಟಿ ಆಫ್ ಅಗ್ರಿಕಲ್ಚರ್ ಸೈನ್ಸ್‌ನಲ್ಲಿ ಸಂಶೋಧಕ ಮತ್ತು ಪ್ರಾಧ್ಯಾಪಕರಾಗಿ ಪ್ರಾರಂಭಿಸಿದ ಇವರು ನಂತರ 1984ರಲ್ಲಿ ಕರ್ನಾಟಕ ಬ್ಯಾಂಕಿನಲ್ಲಿ ಕೃಷಿ ಕ್ಷೇತ್ರಾಧಿಕಾರಿ ಆಗಿ ನೇಮಕಗೊಂಡರು. ತಮ್ಮ ಸೇವೆಯ ಆರಂಭದ ದಿನಗಳಲ್ಲಿಯೇ ಇವರು ಆರಂಭಿಸಿದ ಬ್ಯಾಂಕಿನ 'ಕೃಷಿ ಕಾರ್ಡ್' ಯೋಜನೆ ಇವರ ಕನಸಿನ ಕೂಸು ಎಂದು ಇಂದಿಗೂ ಗುರುತಿಸಿಕೊಳ್ಳುತ್ತಿದೆ. ತಮ್ಮ ಸೇವಾವಧಿಯಲ್ಲಿ ಶಾಖಾ ಮಟ್ಟದಲ್ಲಿ ತಮ್ಮ ಅತ್ಯುತ್ತಮ ಸೇವಾ ಕೈಂಕರ್ಯದಿಂದಾಗಿ ಐದು ಬಾರಿ ಬ್ಯಾಂಕಿನ ಪ್ರತಿಷ್ಠಿತ ಚೇರ್ಮನ್ಸ್ ಕ್ಲಬ್ ಸದಸ್ಯರಾಗಿ ಆಯ್ಕೆಯಾಗಿ, ಬ್ಯಾಂಕಿನ ಆಡಳಿತ ವರ್ಗದ ಗಮನ ಸೆಳೆದರು.

ರಾಷ್ಟ್ರದ ರಾಜಧಾನಿ ನವದೆಹಲಿಯಲ್ಲಿರುವ ಬ್ಯಾಂಕಿನ ಪ್ರಾದೇಶಿಕ ಕಚೇರಿಯ ಮುಖ್ಯಸ್ಥರಾಗಿ ನಿಯುಕ್ತಿಗೊಂಡ ಇವರು ಸುಮಾರು ಆರು ವರ್ಷಗಳ ಕಾಲ ಉತ್ತರ ಹಾಗೂ ಪೂರ್ವ ಭಾರತದಲ್ಲಿ ಕರ್ನಾಟಕ ಬ್ಯಾಂಕಿನ ಶಾಖಾ ವಿಸ್ತಾರ ಹಾಗೂ ವ್ಯವಹಾರದ ಅಭಿವೃದ್ಧಿಯಲ್ಲಿ ವಿಶೇಷ ಪರಿಶ್ರಮ ವಹಿಸಿದರು. ಉತ್ತರಭಾರತದಲ್ಲಿ ಅನೇಕ ಪ್ರಮುಖ ಕೇಂದ್ರಗಳಲ್ಲಿ, ಮುಖ್ಯವಾಗಿ ಹರಿದ್ವಾರ, ವಾರಾಣಾಸಿ, ಅಲಹಾಬಾದ್, ಕಾನ್ಪುರ ಇತ್ಯಾದಿ ಕಡೆಗಳಲ್ಲಿ ಬ್ಯಾಂಕಿನ ಶಾಖೆಗಳನ್ನು ತೆರೆಯುವಲ್ಲಿ ಮಹತ್ತರ ಪಾತ್ರವನ್ನು ನಿರ್ವಹಿಸಿದ ಇವರು ಉತ್ತರ ಭಾರತದಲ್ಲಿ ಬ್ಯಾಂಕಿನ ಹೆಜ್ಜೆ ಗುರುತುಗಳನ್ನು ವಿಸ್ತರಿಸುವಲ್ಲಿ ಯಶಸ್ವಿಯಾದರು. ಆರು ವರ್ಷಗಳ ದೆಹಲಿಯ ತಮ್ಮ ಸೇವಾ ಕಾರ್ಯಾವಧಿಯಲ್ಲಿ ಕರ್ನಾಟಕ ಬ್ಯಾಂಕಿನ 35 ಶಾಖೆಗಳನ್ನು ದೆಹಲಿಯಲ್ಲಿ ಸ್ಥಾಪಿಸುವುದರ ಮೂಲಕ ಒಂದು ದಾಖಲೆಯನ್ನೇ ಮಾಡಿದ್ದಾರೆ. ಇವರ ಇವೆಲ್ಲ ಪ್ರಯತ್ನದ ಫಲವಾಗಿ ಕಲ್ಕತ್ತಾದಲ್ಲಿ ಬ್ಯಾಂಕಿನ ಪ್ರಾದೇಶಿಕ ಕಚೇರಿಯ ಸ್ಥಾಪನೆಗೂ ಕಾರಣರಾದರು.

ಬ್ಯಾಂಕಿನ "ಡಿಜಿಟಲ್ ಬ್ಯಾಂಕಿಂಗ್"ನ ಉಪಕ್ರಮದಲ್ಲಿ ಪ್ರಮುಖ ಪಾತ್ರವಹಿಸಿದ ಇವರು ಕರ್ನಾಟಕ ಬ್ಯಾಂಕಿನ ಮುಂದಿನ ಐದು ವರ್ಷಗಳ ಮಹತ್ವಾಕಾಂಕ್ಷೆಯ ಯೋಜನೆಯಾದ "ಕೆಬಿಎಲ್ ವಿಷನ್ 2020"ಯ ಜಾರಿಯ ಜವಾಬ್ದಾರಿಯನ್ನೂ ಹೊತ್ತಿದ್ದಾರೆ. "ಕೆಬಿಎಲ್ ವಿಷನ್ 2020" ಯೋಜನೆಯು ಬ್ಯಾಂಕನ್ನು "ಬೃಹತ್ ಹಾಗೂ ಸದೃಢ" ಸಂಸ್ಥೆಯಾಗಿ ಹೊರಹೊಮ್ಮಿಸಿ ದೇಶದಾದ್ಯಂತ 1000 ಶಾಖೆ ಮತ್ತು 2500 ಎ.ಟಿ.ಎಮ್.ಗಳನ್ನು ಹೊಂದುವುದರ ಮೂಲಕ 2020ನೇ ಆರ್ಥಿಕ ವರ್ಷದಲ್ಲಿ ಬ್ಯಾಂಕಿನ ಒಟ್ಟು ವಹಿವಾಟನ್ನು ರೂ. 180000 ಕೋಟಿಗಳಿಗೆ ಕೊಂಡೊಯ್ಯುವ ಗುರಿ ಹೊಂದಿದೆ. ಅ

## ಶ್ರದ್ಧಾಂಜಲಿ

# ದೆಹಲಿ ಕರ್ನಾಟಕ ಸಂಘದ ಮಾಜೀ ಅಧ್ಯಕ್ಷ, ಮಾಜೀ ಪ್ರಧಾನ ವಾರ್ತಾಧಿಕಾರಿ ಐ. ರಾಮಮೋಹನ ರಾವ್ ನಿಧನ



ದೆಹಲಿ ಕರ್ನಾಟಕ ಸಂಘದ ಮಾಜೀ ಅಧ್ಯಕ್ಷ, ಭಾರತ ಸರಕಾರದ ಮಾಜೀ ಪ್ರಧಾನ ವಾರ್ತಾಧಿಕಾರಿ ಶ್ರೀ ಐ. ರಾಮಮೋಹನ ರಾವ್ (83) ಅವರು ಇದೇ ಮೇ 13ರಂದು ಅಲ್ಪಕಾಲದ ಅನಾರೋಗ್ಯದಿಂದ ನಿಧನ ಹೊಂದಿದರು. ಅವರು ಅವರ ಪತ್ನಿ ಶ್ರೀಮತಿ ರಾಜೇಶ್ವರಿ ರಾವ್ ಮತ್ತು ಪುತ್ರಿ ಶ್ರೀಮತಿ ಸ್ಮಿತಾ ಪ್ರಕಾಶ್ ಅವರನ್ನು ಅಗಲಿದ್ದಾರೆ. ಅವರು 2005ರಿಂದ ಏಶ್ಯನ್ ನ್ಯೂಸ್ ಇಂಟರ್‌ನ್ಯಾಷನಲ್‌ನ ಪ್ರಧಾನ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದರು. ಭಾರತ ಸರಕಾರದ ಪ್ರಿನ್ಸಿಪಾಲ್ ಇನ್‌ಫಾರ್ಮೇಶನ್ ಆಫೀಸರ್–ಪ್ರಧಾನ ವಾರ್ತಾಧಿಕಾರಿ–ಆಗಿ ಅವರು 1985ರಲ್ಲಿ ನೇಮಕಗೊಂಡು ನಂತರ ದೇಶದ ಪ್ರಧಾನಿಗಳಾದ ರಾಜೀವ್ ಗಾಂಧಿ, ವಿ.ಪಿ. ಸಿಂಗ್, ಚಂದ್ರಶೇಖರ್ ಮತ್ತು ಪಿ.ವಿ. ನರಸಿಂಹ ರಾವ್ ಅವರಿಗೆ ವಾರ್ತಾ ಸಲಹಾಗಾರರಾಗಿ ಕಾರ್ಯ ನಿರ್ವಹಿಸಿದರು.

ಅವರು ಹರ್ಯಾಣ ಸರಕಾರದ, ಪಂಜಾಬ್ ಮುಖ್ಯಮಂತ್ರಿಗಳ, ಜಮ್ಮು ಮತ್ತು ಕಾಶ್ಮೀರ ಸರಕಾರದ ಸಲಹಾಗಾರರಾಗಿಯೂ ಸೇವೆ ಸಲ್ಲಿಸಿದ್ದರು. ಭಾರತ ಸರಕಾರದಲ್ಲಿ ಆಕಾಶವಾಣಿ, ವಿದೇಶ ವ್ಯವಹಾರಗಳ ಸಚಿವಾಲಯ, ಕುಟುಂಬ ಕಲ್ಯಾಣ ಸಚಿವಾಲಯ, ಜಾಹೀರಾತು ಮತ್ತು ದೃಶ್ಯ ಪ್ರಚಾರ ವಿಭಾಗ ಮೊದಲಾದೆಡೆ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದಾರೆ. ಟ್ರಿನಿಡಾಡ್‌ನಲ್ಲಿ ಮಹಾತ್ಮಾ ಗಾಂಧಿ ಕೇಂದ್ರವನ್ನು ಸ್ಥಾಪಿಸಿ ಅದರಲ್ಲಿ ಭಾರತೀಯ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿದ್ದಾರೆ. ಅವರು ಕರ್ಣಾಟಕ ಬ್ಯಾಂಕ್‌ನ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ. 2016ರಲ್ಲಿ ಅವರ ಕಾನ್‌ಫ್ಲಿಕ್ಟ್ ಕಮ್ಯೂನಿಕೇಶನ್–ಕ್ರಾನಿಕ್ಲ್ಸ್ ಆಫ್ ಎ ಕಮ್ಯೂನಿಕೇಟರ್ ಎಂಬ ಪುಸಕವು ಪ್ರಕಟವಾಗಿದೆ. ಅವರು ಇಂಗ್ಲೀಷ್ ಪತ್ರಿಕೆಗಳಲ್ಲಿ ಅಂಕಣಗಳನ್ನೂ ಬರೆಯುತ್ತಿದ್ದರು.

ಅವರ ಭಾರತ ಸರಕಾರದ ಸೇವೆಯ ಆರಂಭ ಕಾಲದಲ್ಲಿ ರಾಜಕೀಯ ನಾಯಕರಾದ ಜವಾಹರಲಾಲ್ ನೆಹರೂ, ಮೊರಾರ್ಜಿ ದೇಸಾಯಿ, ಜಗಜೀವನ ರಾಮ್, ಇಂದಿರಾಗಾಂಧಿಯವರ ಸಂಪರ್ಕವಾಯಿತು. ಭಾರತದ ಸೇನೆಯ ಮುಖ್ಯಸ್ಥರಾದ ಜನರಲ್ ಕೆ.ಎಂ. ಕಾರ್ಯಪ್ಪ, ಜನರಲ್ ಕೆ.ಎಸ್. ತಿಮ್ಮಯ್ಯ, ಫೀಲ್ಡ್ ಮಾರ್ಷಲ್ ಸ್ಯಾಮ್ ಮಾಣಿಕ್ ಷಾ ಮೊದಲಾದವರ ಜತೆ ಅವರು ವ್ಯವಹರಿಸಿದ್ದಾರೆ. ಅವರಿಗೆ ಮೂವತ್ತು ವರ್ಷವಾಗುವುದಕ್ಕಿಂತ ಮೊದಲೇ ಅವರು ಗಾಜಾ ಪಟ್ಟಿಯಲ್ಲಿ ವಿಶ್ವ ಸಂಸ್ಥೆಯ ತುರ್ತುಬಲದಲ್ಲಿ ಸೇವೆ ಮಾಡುವ ಅವಕಾಶ ಪಡೆದರು. ಭಾರತ–ಚೀನಾ ಯುದ್ಧ, 1965 ಮತ್ತು 1971ರ ಭಾರತ–ಪಾಕಿಸ್ಥಾನ ಯುದ್ಧಗಳಿಗೂ ಅವರು ನೇರ ಸಾಕ್ಷಿಯಾಗಿದ್ದರು. ಆಕಾಶವಾಣಿಯ ವಾರ್ತಾ ಸೇವಾ ವಿಭಾಗದ ಮುಖ್ಯಸ್ಥನಾಗಿ 1984ರಲ್ಲಿ ಇಂದಿರಾಗಾಂಧಿಯವರ ಹತ್ಯೆಯ ಸಂದರ್ಭದಲ್ಲಿ ಅವರು ವರದಿಗಾರರಾಗಿದ್ದರು. ಪಂಜಾಬಿನ ಖಾಲಿಸ್ಥಾನ್ ಚಳುವಳಿ, ಕಾಶ್ಮೀರದ ಅಘೋಷಿತ

ಯುದ್ಧಗಳ ಸಂದರ್ಭಗಳಲ್ಲಿ ಅವರು ಮಾಧ್ಯಮಗಳನ್ನು ದೇಶದ ಹಿತರಕ್ಷಣೆಯ ಕಡೆಗೆ ಸೆಳೆದರು. 1999ರಲ್ಲಿ ಪಾಕಿಸ್ತಾನವು ಕಾರ್ಗಿಲ್ ಆಕ್ರಮಣ ಕೈಗೊಂಡಾಗ ಅವರು ಮಾಧ್ಯಮದ ಬೆಂಗಾವಲಾಗಿ ಕೆಲಸ ಮಾಡಿದ್ದರು.

ದೆಹಲಿ ಕರ್ನಾಟಕ ಸಂಘದಲ್ಲಿ 1995–96ರ ಅವಧಿಯಲ್ಲಿ ಅಧ್ಯಕ್ಷ, 1992–94ರ ಸಾಲಿನಲ್ಲಿ ಉಪಾಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ಅವರು ಸಂಘದ ಈಗಿರುವ ಹೊಸ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣ ಹಂತದಲ್ಲಿ ಸಂಘದ ಕಟ್ಟಡ ಸಮಿತಿಯ ಅಧ್ಯಕ್ಷರಾಗಿ ಅಪೂರ್ವ ಸೇವೆ ಸಲ್ಲಿಸಿದ್ದಾರೆ. ದೆಹಲಿ ತುಳುಕೂಟ, ಸೌತ್ ಕೆನರಾ ಕ್ಲಬ್ ಮೊದಲಾದ ಸಂಸ್ಥೆಗಳಲ್ಲಿಯೂ ಅಧ್ಯಕ್ಷ, ಉಪಾಧ್ಯಕ್ಷರಾಗಿ ಹೊರನಾಡಿನಲ್ಲಿ ಭಾಷೆ ಮತ್ತು ಸಂಸ್ಕೃತಿಗಳ ಬೆಳವಣಿಗೆಗೆ ಅಪಾರವಾಗಿ ದುಡಿದಿದ್ದಾರೆ.

ದೆಹಲಿಯಲ್ಲಿ ಸುಮಾರು ಅರುವತ್ತು ವರ್ಷ ಬಾಳಿದ ರಾಮಮೋಹನ ರಾವ್ ಅವರ ಕುರಿತು ಮತ್ತು ಅವರ ಲೇಖನಗಳ ಎರಡು ಕನ್ನಡ ಪುಸ್ತಕಗಳು ಪ್ರಕಟವಾಗಿವೆ. ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ತಮ್ಮ ದೆಹಲಿ ಮಿತ್ರ ಪ್ರಕಾಶನದ ಮೂಲಕ 'ಅದಮ್ಯ' ಎಂಬ ಕೃತಿಯನ್ನು 2009ರಲ್ಲಿ ಪ್ರಕಟಿಸಿದರು. ಡಾ. ವೈ. ಅವನೀಂದ್ರನಾಥ್ ರಾವ್ ಅವರ ಮುತುವರ್ಜಿಯಿಂದ ರಾಮಮೋಹನ ರಾವ್ ಅವರ ಲೇಖನಗಳ ಸಂಗ್ರಹ ನಾನು ಕಂಡ 'ನನ್ನ ದೇಶ' ಎಂಬ ಪುಸ್ತಕವನ್ನು ಬೆಂಗಳೂರಿನ ಪುಸಕಶಕ್ತಿ ಪ್ರಕಾಶನವು ಪ್ರಕಟಿಸಿದೆ. ಅವರಿಗೆ 75 ಸಂವತ್ಸರಗಳು ತುಂಬಿದ ಸಂದರ್ಭದಲ್ಲಿ ಸೌತ್ ಕೆನರಾ ಕ್ಲಬ್ 2009ರಲ್ಲಿ ಅವರನ್ನು ನವದೆಹಲಿಯಲ್ಲಿ ಕರಾವಳಿ ಮೂಲದ ವಿವಿಧ ಸಂಸ್ಥೆಗಳ ಜತೆ ಸೇರಿ ಅಭಿನಂದಿಸಿದೆ.

ಕರ್ನಾಟಕದ ಈಗಿನ ಉಡುಪಿ ಜಿಲ್ಲೆಯ ಕಾರ್ಕಳದ ಸುಪ್ರಸಿದ್ಧ ನ್ಯಾಯವಾದಿ ಸುಬ್ಬರಾವ್ ಮತ್ತು ಸೀತಾರತ್ನರ ಸುಪುತ್ರರು ರಾಮಮೋಹನ ರಾಯರು. ನರೇಂದ್ರ ರಾವ್ ಮತ್ತು ಜ್ಞಾನೇಶ್ವರ ರಾವ್ ಅವರ ಇಬ್ಬರು ಸೋದರರು. ವತ್ಸಲಾ, ರಾಜೇಶ್ವರಿ ಮತ್ತು ಮನೋಹರಿ ಅವರ ಸೋದರಿಯರು. ಅವರ ಪುತ್ರ ಖ್ಯಾತ ಮಕ್ಕಳ ತಜ್ಞ ಡಾ. ರೋಹಿತ್ ಕೆಲ ಸಮಯದ ಹಿಂದೆಯಷ್ಟೇ ಅಪಘಾತದಿಂದಾಗಿ ಅನಾರೋಗ್ಯಗೊಂಡು ನಿಧನರಾಗಿದ್ದರು. ಇಂಜಿನಿಯರ್ ಆಗಬೇಕೆಂದು ಉನ್ನತ ಶಿಕ್ಷಣ ಪಡೆಯಲು ಪ್ರಯತ್ನಿಸಿದರೂ ಸಾಧ್ಯವಾಗದೇ ತಂದೆಯಂತೆ ಕಾನೂನು ವ್ಯಾಸಂಗವನ್ನು ಮಾಡಲು ಅವರು ಮುಂಬಯಿಗೆ ಹೋದರು. ಅಲ್ಲಿ ಅವರು ಯೂನಿವರ್ಸಿಟಿ ಸ್ಕೂಲ್ ಆಫ್ ಇಕಾನಾಮಿಕ್ಸ್ ಮತ್ತು ಸೋಶಿಯಾಲಜಿಯಲ್ಲಿ ರಾಜ್ಯಶಾಸ್ತ್ರದಲ್ಲಿ ಎಂಎ ಪಡೆದರು. ನಂತರ ಮುಂಬೈ ಸರಕಾರಿ ಕಾಲೇಜಿನಿಂದ ಎಲ್‌ಎಲ್‌ಬಿ ಪದವಿ ಪಡೆದರು. ಅದರ ನಂತರ ದೆಹಲಿಗೆ ಬಂದ ಅವರು ಪ್ರೆಸ್ ಇನ್‌ಫಾರ್ಮೇಶನ್ ಬ್ಯೂರೋ ಸೇರಿದರು. ಅವರು 1969ರಿಂದ 1973ರ ನಡುವೆ ಭಾರತೀಯ ಸೇನೆಯ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿದ್ದರು. ರಾಮಮೋಹನ ರಾಯರು 1971ರ ಭಾರತ–ಪಾಕಿಸ್ಥಾನ ಯುದ್ಧದ ಸಂದರ್ಭ ಮತ್ತು 1982ರ ಆಲಿಪ್ತ ಶೃಂಗಸಭೆಯ ಸಂದರ್ಭದಲ್ಲಿ ಇಂದಿರಾಗಾಂಧಿಯವರ ಮಾಹಿತಿ ಸಲಹಾಗಾರರಾದ ಹೆಚ್.ವೈ. ಶಾರದಾ ಪ್ರಸಾದ್ ಅವರ ಜತೆ ಕೆಲಸ ಮಾಡಿದ್ದರು. ಅ

***ಬಾಲಕೃಷ್ಣ ನಾಯ್ಕ್ ಡಿ.***

# ನಗರದ ಎಲ್ಲ ಬಗೆಯ ಕ್ರೌರ್ಯಗಳನ್ನು ನಿರಾಕರಿಸಿ ಮಗುವಿನ ಮುಗ್ಧತೆಯನ್ನು ಕೊನೆ ತನಕ ಕಾಪಾಡಿಕೊಂಡು ಬದುಕಿದ್ದ ಇನ್ನ ರಾಮಮೋಹನ ರಾವ್

ಇನ್ನ ರಾಮಮೋಹನ ರಾವ್ ಅವರು ಹೊರನಾಡ ಕನ್ನಡಿಗರ ಹೆಮ್ಮೆಯಾಗಿದ್ದರು. ಭಾರತ ಸರಕಾರದಲ್ಲಿ ಉನ್ನತ ಹುದ್ದೆಗಳನ್ನು ಸುದೀರ್ಘ ಕಾಲ ಘನತೆಯಿಂದ ನಿಭಾಯಿಸಿದ ಅವರು ಕನ್ನಡ ಮತ್ತು ತುಳುಭಾಷೆಗಳ ವಿಚಾರದಲ್ಲಿ ಅತ್ಯಂತ ವಿನೀತರಾಗಿ ಬದ್ಧತೆಯಿಂದ ಕೆಲಸ ಮಾಡುತ್ತಿದ್ದರು. ಅವರು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದ ಅವಧಿಯಲ್ಲಿಯೇ ಈಗ ಎದ್ದು ಕಾಣುತ್ತಿರುವ ಸಾಂಸ್ಕೃತಿಕ ಸಮುಚ್ಚಯಕ್ಕೆ ಬೀಜಾಂಕುರವಾದ್ದು. ನಾನು ಸಂಘದ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಅವರು ಕಟ್ಟಡ ಸಮಿತಿಯ ಸಂಚಾಲಕರಾಗಿದ್ದು ಕಟ್ಟಡದ ಕೆಲಸಗಳಿಗೆ ಹಣಕಾಸಿನ ತೊಂದರೆಯಾಗದಂತೆ ನೋಡಿಕೊಂಡಿದ್ದರಲ್ಲದೆ, ಆನಂತರದ ಕಾಲದಲ್ಲಿ ಸಂಘದ ಬಹುತೇಕ ಎಲ್ಲ ಕಾರ್ಯಕ್ರಮಗಳಲ್ಲೂ ಭಾಗವಹಿಸುತ್ತಿದ್ದರು, ಸಂಘದ ಬಿಕ್ಕಟ್ಟಿನ ಕ್ಷಣಗಳಲ್ಲಿ ನೇರ ಮಾತುಗಳ ಮೂಲಕ ಸಂಘಕ್ಕೆ ಮಾರ್ಗದರ್ಶನ ಮಾಡುತ್ತಿದ್ದರು. ತುಳುವನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸಬೇಕೆಂಬ ತುಳುವರ ಬೇಡಿಕೆಯ ಮುಂಚೂಣಿಯಲ್ಲಿ ಶ್ರೀ ರಾಮಮೋಹನ ರಾವ್ ಅವರಿದ್ದರು. ಅವರು ಮುಖ್ಯ ಸಂಪಾದಕರಾಗಿದ್ದ ಏಷಿಯಾ ನ್ಯೂಸ್ ಇಂಟರ್ ನ್ಯಾಶನಲ್‌ನಲ್ಲಿ ಕನ್ನಡ ಮತ್ತು ತುಳುವಿನ ಕುರಿತು ಆದಷ್ಟೂ ಹೆಚ್ಚು ಸುದ್ದಿ ಪ್ರಸಾರವಾಗುವಂತೆ ಸದ್ದಿಲ್ಲದೇ ಮಾಡುತ್ತಿದ್ದರು. ಇದೀಗ ನಾನು ಕೆಲಸ ಮಾಡುತ್ತಿರುವ ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ ಕನ್ನಡ ಭಾಷಾ ಪೀಠದ ಎಲ್ಲ ಚಟುವಟಿಕೆಗಳಿಗೂ ಅಂತಾರಾಷ್ಟ್ರೀಯವಾದ ಒಂದು ಮನ್ನಣೆಯನ್ನು ಅವರು ತಂದುಕೊಡುತ್ತಿದ್ದರು. ಕರ್ನಾಟದ ಯಾರೇ ಆದರೂ ಸಹಾಯಕ್ಕಾಗಿ ಅವರನ್ನು ಸಂಪರ್ಕಿಸಿದರೆ, ಅವರು ಅದನ್ನು ಮನಸಿಗೆ ಹಚ್ಚಿಕೊಂಡು ಕೆಲಸ ಮಾಡಿಕೊಡುತ್ತಿದ್ದರು. ಸುದೀರ್ಘ ಕಾಲ ದೆಹಲಿಯಲ್ಲಿ ನೆಲೆಸಿದ್ದ ಅವರಿಗೆ ಶಾರದಾ ಪ್ರಸಾದ್, ಶಾ ಬಾಲೂ ರಾವ್, ಎಂ.ಕೆ. ಧರ್ಮರಾಜ್ ಮೊದಲಾದ ಹಿರಿಯ ಸಾಂಸ್ಕೃತಿಕ ನಾಯಕರ ಜೊತೆ ನಿಕಟ ಸಂಪರ್ಕವಿತ್ತು. ಆ ತಲೆಮಾರಿನ ಕೊನೆಯ ಕೊಂಡಿಯಾಗಿದ್ದ ರಾಮಮೋಹನ ರಾವ್ ಅವರ ನಿಧನದಿಂದ ದೆಹಲಿ ಕನ್ನಡಿಗರು ಹಿರಿಯ ಪರಂಪರೆಯ ದೊಡ್ಡ ವ್ಯಕ್ತಿತ್ವವೊಂದನ್ನು ಕಳೆದುಕೊಂಡಂತಾಗಿದೆ. ಮಹಾನಗರದಲ್ಲಿ ಬದುಕಿದ್ದರೂ ನಗರದ ಎಲ್ಲ ಬಗೆಯ ಕ್ರೌರ್ಯಗಳನ್ನು ನಿರಾಕರಿಸಿ ಮಗುವಿನ ಮುಗ್ಧತೆಯನ್ನು ಕೊನೆತನಕ ಕಾಪಾಡಿಕೊಂಡು ಬದುಕಿದ್ದ ಅವರು ನನ್ನಂಥವರಿಗೆ ಎಂದೆಂದೂ ಒಂದು ಮರೆಯದ ಆದರ್ಶ.



**ದೆಹಲಿಯಲ್ಲಿ ಕನ್ನಡದ ಧ್ವನಿ ನಿರಂತರವಾಗಿ ಕೇಳುವ ಹಾಗೆ ಮಾಡಿದ್ದರು. ಈಗ ರಾಜಧಾನಿಯಲ್ಲಿ ತಲೆ ಎತ್ತಿ ನಿಂತಿರುವ ಬೃಹತ್ ಸಾಂಸ್ಕೃತಿಕ ಸಮುಚ್ಚಯದ 'ಕಟ್ಟಡ ಸಮಿತಿ'ಯ ಅಧ್ಯಕ್ಷರಾಗಿ ದುಡಿದ ಅವರು ಕಟ್ಟಡದ ಕೆಲಸಗಳಿಗೆ ಹಣದ ತೊಂದರೆಯಾಗದಂತೆ ನೋಡಿಕೊಂಡಿದ್ದರು. ಕಟ್ಟಡ ಮೇಲೇಳುವ ಹೊತ್ತಿಗೆ ಅವರು ಕರ್ನಾಟಕ ಬ್ಯಾಂಕಿನ ನಿರ್ದೇಶಕರಲ್ಲೊಬ್ಬ ರಾಗಿದ್ದುದರಿಂದ ನಮಗೆ ಸಾಲ ಸಿಗುವುದೂ ಸುಲಭವಾಗಿತ್ತು.**

ಕರ್ನಾಟಕದಲ್ಲಿ ಹುಟ್ಟಿ ಬೆಳೆದು, ರಾಷ್ಟ್ರಮಟ್ಟದಲ್ಲಿ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೆಲಸ ಮಾಡಿದ ಮಹನೀಯರು ಕೆಲವರಿದ್ದಾರೆ. ಹಾಗೆ ಕೆಲಸ ಮಾಡಿದ ಉನ್ನತ ಕನ್ನಡಿಗರಲ್ಲಿ ಶ್ರೀ ಐ. ರಾಮಮೋಹನ ರಾವ್ ಅವರೂ ಒಬ್ಬರು. ಕಾರ್ಕಳದ ಸಮೀಪದ ಇನ್ನ ಎಂಬ ಪುಟ್ಟ ಹಳ್ಳಿಯಲ್ಲಿ ಜನಿಸಿದ ಅವರು ಮುಂದೆ ಭಾರತದ ಪ್ರಧಾನಿಗಳಾಗಿದ್ದ ರಾಜೀವಗಾಂಧಿ, ವಿ.ಪಿ. ಸಿಂಗ್, ಚಂದ್ರಶೇಖರ್ ಹಾಗೂ ಪಿ.ವಿ. ನರಸಿಂಹ ರಾವ್ ಅವರಿಗೆ ಪ್ರಧಾನ ವಾರ್ತಾ ಸಲಹೆಗಾರರಾಗಿ ಹಾಗೂ ವಕ್ತಾರರಾಗಿ ಆರೂವರೆ ವರ್ಷಗಳ ಕಾಲ ಕೆಲಸ ಮಾಡಿದರು ಎಂಬ ವಿಷಯ ನಮ್ಮ ಹೆಮ್ಮೆಗೆ ಕಾರಣವಾಗಬೇಕು.

ಭಾರತ ಸರ್ಕಾರದ ರಕ್ಷಣಾ ಸಚಿವಾಲಯದಲ್ಲಿ

ಭಾರತೀಯ ಸೇನೆಯ ಸಂಪರ್ಕಾಧಿಕಾರಿಯಾಗಿ ಅವರು ಎರಡು ದಶಕಗಳ ಕಾಲ ದುಡಿದರು. ಸೇನೆಯಲ್ಲಿ ಬ್ರಿಗೇಡಿಯರ್ ಸ್ಥಾನ ಪಡೆದು, ಗಾಜಾಪಟ್ಟಿಯಲ್ಲಿ ವಿಶ್ವಸಂಸ್ಥೆಯ ತುರ್ತು ಪಡೆಯ ಉಪಸಂಪರ್ಕಾಧಿಕಾರಿಯಾಗಿ ಓಡಾಡಿದರು, ತುರ್ತು ಪಡೆಯ ಮುಖವಾಣಿ 'ದಿ ಸ್ಯಾಂಡ್ ಡ್ಯೂನ್' ನ ಸಂಪಾದಕರಾದರು. ಇಷ್ಟೆಲ್ಲಾ ಆದಾಗಲೂ ಕನ್ನಡ–ತುಳುವಿನೊಡನೆ ನಿರಂತರ ಸಂಪರ್ಕ ಇರಿಸಿಕೊಂಡು ತನ್ನ ಕಾಲು ನೆಲದಲ್ಲಿಯೇ ಇರುವಂತೆ ನಿರಂತರವಾಗಿ ನೋಡಿಕೊಂಡರು. ಕಾರಣ ಅವರಿಗೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿಯೂ ಕೆಲಸ ಮಾಡಲು ಸಾಧ್ಯವಾಯಿತು, ತುಳುಕೂಟದ ಉಪಾಧ್ಯಕ್ಷರಾಗಿಯೂ ಶ್ರೀ ಆಸ್ಕರ್ ಫೆರ್ನಾಂಡಿಸ್ ಅವರ ಜೊತೆ ಸೇರಿ ತುಳುವಿಗಾಗಿ ಹೋರಾಡಲು ಕೂಡಾ ಸಾಧ್ಯವಾಯಿತು.

ಹಿತಮಿತವಾದ ಆದರೆ ನಿಖರ ಹಾಗೂ ನೇರ ಮಾತು, ಮುಖದಲ್ಲಿ ಮಗುವಿನಂತಹ ನಿಷ್ಕಲ್ಮಶವಾದ ನಗು, ಸ್ನೇಹಶೀಲ ವ್ಯಕ್ತಿತ್ವಗಳಿಂದಾಗಿ ಶ್ರೀ ರಾಮಮೋಹನ ರಾವ್ ದೆಹಲಿಯಲ್ಲಿ ಎಲ್ಲರಿಗೂ ಇಷ್ಟ. ಜಗತ್ತಿನ ಬೃಹತ್ ವಾರ್ತಾಸಂಸ್ಥೆಯಾಗಿರುವ ಏಷಿಯಾ ನ್ಯೂಸ್ ಇಂಟರ್‌ನ್ಯಾಶನಲ್ (ಎಎನ್‌ಐ)ನಲ್ಲಿ ಅವರು ಮುಖ್ಯ ವಾರ್ತಾ ಸಂಪಾದಕ ಹಾಗೂ ಅದರ ಉಪಾಧ್ಯಕ್ಷ. ಇಷ್ಟು ದೊಡ್ಡ ಹುದ್ದೆಯಲ್ಲಿದ್ದರೂ ಯಾರಾದರೂ ಅವರನ್ನು ಸುಲಭವಾಗಿ ಭೇಟಿ ಮಾಡಬಹುದಾಗಿತ್ತು ಮತ್ತು ಅವರಿಂದ ಸಹಾಯ ಕೇಳಬಹುದಾಗಿತ್ತು.

ಅರ್ಥಶಾಸ್ತ್ರ, ಸಮಾಜಶಾಸ್ತ್ರ ಮತ್ತು ರಾಜಕೀಯ ಶಾಸ್ತ್ರಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಶ್ರೀ ರಾವ್ ಅವರು ವಕೀಲರಾಗಬೇಕೆಂಬ ಕನಸು ಹೊತ್ತು ಕಾನೂನು ಶಾಸ್ತ್ರದಲ್ಲಿಯೂ ಸ್ನಾತಕ ಪದವಿ ಪಡೆದಿದ್ದರು. ಆದರೆ ಸೇರಿದ್ದು ಭಾರತೀಯ ಸಂಪರ್ಕ ಸೇವೆಯಲ್ಲಿ ವಾರ್ತಾಧಿಕಾರಿಯಾಗಿ. ಮುಂದೆ ಆಕಾಶವಾಣಿ, ವಿದೇಶ ವ್ಯವಹಾರಗಳ ಸಚಿವಾಲಯ, ಕೇಂದ್ರ ಜಾಹೀರಾತು ವಿಭಾಗ, ಕುಟುಂಬ ಕಲ್ಯಾಣ ಸಚಿವಾಲಯಗಳಲ್ಲಿ ಅವರು ನಿಷ್ಠೆಯಿಂದ ದುಡಿದರು. ಭಾರತದ ಕೆಲವು ಅತ್ಯಂತ ಸಂದಿಗ್ಧ ಐತಿಹಾಸಿಕ ಕ್ಷಣಗಳಲ್ಲಿ ಅವರು ಕೆಲಸ ಮಾಡಬೇಕಾಗಿ ಬಂತು. "ರಾಜೀವ್ ಗಾಂಧಿಯವರ ಹತ್ಯೆ ಆದಾಗ ಸುದ್ದಿ ನಿಯಂತ್ರಣದ ಜವಾಬ್ದಾರಿ ನನ್ನ ಮೇಲಿತ್ತು. ನನ್ನ ಜೀವನದ ಅತ್ಯಂತ ಕ್ಲಿಷ್ಟಕರ ದಿನಗಳವು" ಎಂದು ಅವರು ನನ್ನೊಡನೆ ಒಮ್ಮೆ ಹೇಳಿದ್ದರು. "1983ರಲ್ಲಿ ದೆಹಲಿಯಲ್ಲಿ ನಡೆದ ಅಲಿಪ್ತ ರಾಷ್ಟ್ರಗಳ ಮತ್ತು ಕಾಮನ್‌ವೆಲ್ತ್ ರಾಷ್ಟ್ರಗಳ ಶೃಂಗಸಭೆಯ ವೇಳೆ ಮಾಧ್ಯಮ ನಿರ್ದೇಶಕನಾಗಿ ಕೆಲಸ ಮಾಡುವುದು ಸುಲಭವಾಗಿರಲಿಲ್ಲ" ಎಂದೂ ಅವರು ಹೇಳಿದ್ದರು.

ಶ್ರೀ ರಾಮಮೋಹನ ರಾವ್ ಅವರು 1992ರಲ್ಲಿ ಭಾರತ ಸರ್ಕಾರದ ಸೇವೆಯಿಂದ ಅಧಿಕೃತವಾಗಿ ನಿವೃತ್ತರಾದರು. ನಿವೃತ್ತಿಯ ಆನಂತರವೂ ಅವರು ಹಲವಾರು ಜವಾಬ್ದಾರಿಗಳನ್ನು ನಿರ್ವಹಿಸಬೇಕಾಯಿತು. ಅದರಲ್ಲಿ ಬಹಳ ಪ್ರಮುಖವಾದದ್ದೆಂದರೆ ಜಮ್ಮು–ಕಾಶ್ಮೀರ ಸರ್ಕಾರಕ್ಕೆ ಸಲಹೆಗಾರರಾಗಿ ನೇಮಕಗೊಂಡದ್ದು. ಕಾಶ್ಮೀರ ಕುರಿತಾಗಿ ಪಾಕಿಸ್ತಾನವು ಮಾಡುತ್ತಿರುವ ಅಪಪ್ರಚಾರಗಳನ್ನು ಇದಿರಿಸಿ, ಭಾರತ ಪರವಾದ ಪ್ರಚಾರಗಳನ್ನು ಜಗತ್ತಿನಾದ್ಯಂತ ಹರಡುವಲ್ಲಿ ಶ್ರೀ ರಾಮಮೋಹನ ರಾವ್ ಅವರು ಪ್ರಮುಖ ಪಾತ್ರವಹಿಸಿದರು. ಭಾರತ ಸರ್ಕಾರವು ವಿಶ್ವಸಂಸ್ಥೆಗೆ ಕಳುಹಿಸಿಕೊಟ್ಟ ಮಾಧ್ಯಮ ನಿಯೋಗದ ಸದಸ್ಯರಾಗಿ ಅವರು ಮಹತ್ವದ ಕಾರ್ಯ ನಿರ್ವಹಿಸಿದ್ದರು.

ವಿದೇಶದಲ್ಲಿ ಶ್ರೀ ರಾವ್ ಅವರು ಮಾಡಿದ ಬಹುದೊಡ್ಡ ಕೆಲಸಗಳಲ್ಲಿ ಟ್ರಿನಿಡಾಡ್‌ನಲ್ಲಿ ಸ್ಥಾಪಿಸಿದ 'ಮಹಾತ್ಮಾ ಗಾಂಧಿ ಸಾಂಸ್ಕೃತಿಕ ಸಹಯೋಗ ಕೇಂದ್ರ'ವೂ ಒಂದು. 1996–1997ರ ಅವಧಿಯಲ್ಲಿ ರಾಮಮೋಹನ ರಾಯರ ನಿರ್ದೇಶಕತ್ವದಲ್ಲಿ ಸ್ಥಾಪಿಸಲಾದ ಈ ಕೇಂದ್ರವು ಇಂದು ಟ್ರಿನಿಡಾಡ್‌ನ ಎಲ್ಲ ಅನಿವಾಸೀ ಭಾರತೀಯರ ಚಟುವಟಿಕೆಗಳಿಗೆ ಆಶ್ರಯ ನೀಡುವ ಕೇಂದ್ರವಾಗಿ ಬೃಹತ್ತಾಗಿ ಬೆಳದಿದೆ. ಶೈಕ್ಷಣಿಕ ಕ್ಷೇತ್ರದಲ್ಲಿಯೂ ರಾಮಮೋಹನ ರಾಯರಿಗೆ ದೊಡ್ಡ ಹೆಸರಿದೆ. 1998–99ರ ಅವಧಿಯಲ್ಲಿ ಅವರು ನವದೆಹಲಿಯ 'ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮಾಸ್ ಕಮ್ಯೂನಿಕೇಶನ್' ಸಂಸ್ಥೆಯಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿಯೂ, 2001ರಲ್ಲಿ ಪ್ರಸಾರ ಭಾರತೀಯ ಸಲಹಾಗಾರರಾಗಿಯೂ ಅವರು ನೇಮಕಗೊಂಡಿದ್ದರು. ಕಾರ್ಗಿಲ್ ಯುದ್ಧದ ಆನಂತರ ಭಾರತ ಸರ್ಕಾರ ಸಿದ್ಧಪಡಿಸಿದ ವರದಿ (2002–2004)ಗಾಗಿ ರಾಮಮೋಹನ ರಾಯರು ವಿಶೇಷವಾಗಿ ದುಡಿದಿದ್ದರು.

ಹೀಗೆ ವೃತ್ತಿ ಸಂಬಂಧಿಯಾದ ಹುದ್ದೆಗಳಲ್ಲಿ ಪ್ರಾಮಾಣಿಕವಾಗಿ ದುಡಿದ ಶ್ರೀ ರಾಮಮೋಹನ ರಾಯರು ಕನ್ನಡದ–ತುಳುವಿನ ಅಭಿವೃದ್ಧಿಗೆ ಸಂಬಂಧಿಸಿದಂತೆಯೂ ದೆಹಲಿಯಲ್ಲಿ ಅಪಾರವಾಗಿ ದುಡಿದಿದ್ದರು. ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾಗಿ, ಆನಂತರ ಅದರ ಅಧ್ಯಕ್ಷರಾಗಿ ದುಡಿದ ಅವರು ದೆಹಲಿಯಲ್ಲಿ ಕನ್ನಡದ ಧ್ವನಿ ನಿರಂತರವಾಗಿ ಕೇಳುವ ಹಾಗೆ ಮಾಡಿದ್ದರು. ಈಗ ರಾಜಧಾನಿಯಲ್ಲಿ ತಲೆ ಎತ್ತಿ ನಿಂತಿರುವ ಬೃಹತ್ ಸಾಂಸ್ಕೃತಿಕ ಸಮುಚ್ಚಯದ 'ಕಟ್ಟಡ ಸಮಿತಿ'ಯ ಅಧ್ಯಕ್ಷರಾಗಿ ದುಡಿದ ಅವರು ಕಟ್ಟಡದ ಕೆಲಸಗಳಿಗೆ ಹಣದ ತೊಂದರೆಯಾಗದಂತೆ ನೋಡಿಕೊಂಡಿದ್ದರು. ಕಟ್ಟಡ ಮೇಲೇಳುವ ಹೊತ್ತಿಗೆ ಅವರು ಕರ್ನಾಟಕ ಬ್ಯಾಂಕಿನ ನಿರ್ದೇಶಕರಲ್ಲೊಬ್ಬರಾಗಿದ್ದುದರಿಂದ ನಮಗೆ ಸಾಲ ಸಿಗುವುದೂ ಸುಲಭವಾಗಿತ್ತು. ದೆಹಲಿ ತುಳು ಕೂಟದ ಅಧ್ಯಕ್ಷರಾಗಿದ್ದಾಗ ಅವರು ಇನ್ನೊಬ್ಬ ತುಳುವ ಜಾರ್ಜ್ ಫೆರ್ನಾಂಡಿಸ್ ಅವರ ಸಹಾಯದಿಂದ ತುಳು ಭಾಷೆಯನ್ನು ಭಾರತದ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಸೇರಿಸಲು ಹೋರಾಡಿದ್ದರು. ಕನ್ನಡ ಮತ್ತು ತುಳುವಿನ ಕುರಿತಾಗಿ ರಾಷ್ಟ್ರಮಟ್ಟದ ಸುದ್ದಿ ಬಿತ್ತರವಾಗುವಂತೆ ಅವರು ಮಾಡುತ್ತಿದ್ದರು. ಯಕ್ಷಗಾನ ಅವರ ಇನ್ನೊಂದು ಪ್ರೀತಿಯ ಕ್ಷೇತ್ರವಾಗಿತ್ತು.

ನಾನು ವೈಯಕ್ತಿಕವಾಗಿ ಅವರಿಂದ ತುಂಬ ಪ್ರಭಾವಿತನಾಗಿದ್ದೇನೆ. ಮಾತಿನಲ್ಲಿ ಸದಾ ಸೌಜನ್ಯ, ಏನನ್ನಾದರೂ ಹೇಳಲೇ ಬೇಕಾದ ಸಂದರ್ಭದಲ್ಲಿ ನಿಖರವಾಗಿ ಅದನ್ನು ಮಂಡಿಸುವ ಧೈರ್ಯ, ವಿಷಯದಲ್ಲಿ ಸ್ಪಷ್ಟತೆ, ಅತೀವ ಜೀವನೋತ್ಸಾಹ, ಲಘುವಾದ ಹಾಸ್ಯಪ್ರಜ್ಞೆ ಮೊದಲಾದ ಗುಣಗಳಿಂದ ಅವರು ನಮ್ಮ ನಡುವಣ ದೊಡ್ಡ ಶಕ್ತಿಯಾಗಿ ಬೆಳೆದಿದ್ದರು. ಅವರಿಗೆ ಸಹಜವಾಗಿ ಸಲ್ಲಬೇಕಾಗಿದ್ದ ಕೆಲವಾದರೂ ಮಹತ್ವದ ಪ್ರಶಸ್ತಿಗಳು ಅವರಿಗೆ ಕೊನೆವರೆಗೆ ಸಿಗಲೇ ಇಲ್ಲ. ಈ ನಿಟ್ಟಿನಲ್ಲಿ ನಾವು ಕೆಲವರು ಮಾಡಿದ ಪ್ರಯತ್ನಗಳು ವಿಫಲವಾದುವು. ಅವರು ಹೊರನಾಡಿನಲ್ಲಿ ಇದ್ದುದೇ ಅದಕ್ಕೆ ಮುಖ್ಯ ಕಾರಣವಾಗಿತ್ತು. ಅ

***ಡಾ. ಪುರುಷೋತ್ತಮ ಬಿಳಿಮಲೆ***





# ಶತಮಾನದ ಪ್ರಭಾವಿ ಕನ್ನಡಿಗ ಐ. ರಾಮಮೋಹನ ರಾವ್

ಪ್ರಧಾನ ಮಂತ್ರಿಯವರ ಕಾರ್ಯಾಲಯ ಭಾರತದ ಶಕ್ತಿ ರಾಜಕಾರಣದ ಕೇಂದ್ರ ಸ್ಥಾನ. ಈ ಕಾರ್ಯಾಲಯದಲ್ಲಿ ಸುದೀರ್ಘ ಕಾಲ ಸಂಪರ್ಕ ಮತ್ತು ಪ್ರಭಾವ ಹೊಂದಿದ್ದ ಕನ್ನಡಿಗ ಇನ್ನ ರಾಮಮೋಹನ ರಾವ್.

ಸರಕಾರದ ಪ್ರಧಾನ ವಾರ್ತಾಧಿಕಾರಿ, ನಾಲ್ವರು ಪ್ರಧಾನಿಗಳಾದ ರಾಜೀವ್ ಗಾಂಧಿ, ಚಂದ್ರಶೇಖರ್, ವಿ.ಪಿ. ಸಿಂಗ್ ಮತ್ತು ಪಿ.ವಿ. ನರಸಿಂಹ ರಾವ್ ಅವರಿಗೆ ಮಾಧ್ಯಮ ಸಲಹೆಗಾರ, ಪ್ರಧಾನಿ ಐ.ಕೆ. ಗುಜ್ರಾಲ್ ಅವರ ಅಪೇಕ್ಷೆ ಮೇರೆಗೆ ದ್ವೀಪ ರಾಷ್ಟ್ರಕ್ಕೆ ಸಾಂಸ್ಕೃತಿಕ ರಾಯಭಾರಿಯಾಗಿ ತೆರಳಿ ಟ್ರೆನಿಡಾಡ್‌ನಲ್ಲಿ ಗಾಂಧಿ ಸ್ಮಾರಕ ಸಾಂಸ್ಕೃತಿಕ ಕೇಂದ್ರ ಸ್ಥಾಪನೆ, ಪ್ರಧಾನಿ ವಾಜಪೇಯಿ ಸರಕಾರದಲ್ಲಿ ರಕ್ಷಣಾ ಸಚಿವರ ಸಲಹೆಗಾರ, ರಾಷ್ಟ್ರಪತಿ ಆಳ್ವಿಕೆಯಂತಹ ವಿಶೇಷ ಸಂದರ್ಭಗಳಲ್ಲಿ ಜಮ್ಮು-ಕಾಶ್ಮೀರ, ಪಂಜಾಬ್ ಮತ್ತು ಹರ್ಯಾಣ ಸರಕಾರಗಳಿಗೆ ಸಲಹೆಗಾರ, ಹೀಗೆ ರಾಮಮೋಹನ ರಾವ್ ಅವರ ಸಾಧನೆಯ ಪಟ್ಟಿ ಬೆಳೆಯುತ್ತದೆ. ಇವೆಲ್ಲವೂ ಐ. ರಾಮಮೋಹನ ರಾವ್ ಅವರು ಒಂದು ಶತಮಾನದ ಅವಧಿಯಲ್ಲಿ ಕಂಡ ಪ್ರಭಾವಿ ಕನ್ನಡಿಗ ಎಂಬುದನ್ನು ರುಜುವಾತುಗೊಳಿಸಿದೆ.

ಇನ್ನ ರಾಮಮೋಹನ ರಾವ್ ಅವರು ನನಗೆ ಸಂಬಂಧಿಕರು. ಉಡುಪಿ ಜಿಲ್ಲೆಯ ಇನ್ನ ಗ್ರಾಮಕ್ಕೆ ಸಮೀಪದ ಎಲ್ಲೂರು ನನ್ನ ಹಿರಿಯರ ಊರು. ಇನ್ನದ ಕೇದಿಗೆ, ಕಲ್ಲಟ ಮತ್ತು ಸಲ್ಡಾನ ಕುಟುಂಬಗಳ ಸದಸ್ಯರು ಪ್ರತಿಭಾಶಿಖರಗಳು. ಮಹಾರಾಷ್ಟ್ರ ಸರಕಾರದಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ. ಪಿ. ಲಲಿತಾ ರಾವ್, ಕ್ರಿಕೆಟ್‌ನ ದಂತಕತೆ ರವಿಶಾಸ್ತ್ರಿ ಮೊದಲಾದವರು ಈ ಮನೆತನಕ್ಕೆ ಸೇರಿದವರು.

ದೆಹಲಿಯಲ್ಲಿ ರಾಮ ಮೋಹನ ರಾವ್ ಅವರನ್ನು ನಾನು ಮೊದಲ ಬಾರಿ ಭೇಟಿಯಾದಾಗ ಅವರಿಗೆ ಸುಮಾರು ಎಪ್ಪತ್ತು ವರುಷ. ಅವರು ಆಗ ರಕ್ಷಣಾ ಸಚಿವರ ಸಲಹೆಗಾರ. ಅದುವರೆಗೂ ಅವರು ತಮ್ಮ ಕುರಿತಾಗಲಿ ಅಥವಾ ಇತರರು ಅವರ ಕುರಿತಾಗಲೀ ಪುಸ್ತಕ ಬರೆದಿರಲಿಲ್ಲ. ಇದನ್ನು ತೀವ್ರವಾಗಿ ಹಚ್ಚಿಕೊಂಡ ನಾನು ಅವರಲ್ಲಿದ್ದ ಲೇಖನಗಳನ್ನು ಮತ್ತು ಅಪರೂಪದ ಭಾವಚಿತ್ರಗಳನ್ನು ಸಂಗ್ರಹಿಸಿದೆ. ನನ್ನ ಆಶಯಕ್ಕೆ ಸ್ಪಂದಿಸಿದ ಗೆಳೆಯ ಮತ್ತು ಪ್ರಕಾಶಕ ವಸಂತ ಶೆಟ್ಟಿ ಬೆಳ್ಳಾರೆ ಅವರು 'ಅದಮ್ಯ' ಕೃತಿಯನ್ನು ಪ್ರಕಟಿಸಿದರು. ಈ ಯಶೋಗಾಥೆಗೆ ಪತ್ರಕರ್ತ ಜಯರಾಮ ಮಲಾರ್ ಸಂಪಾದಕರು. ನಂತರ  ನಾನು ಹೊಸ ಲೇಖನಗಳನ್ನು ಸೇರಿಸಿ 'ನಾನು ಕಂಡ ನನ್ನ ದೇಶ' ಕೃತಿಯನ್ನು ಹೊರತಂದೆ. ಗೆಳೆಯ ಬಾಲಕೃಷ್ಣ ನಾಯ್ಕ್ ಇಲ್ಲಿನ ಕೆಲವು ಲೇಖನಗಳನ್ನು ಅನುವಾದಿಸಿದ್ದರು. ಈ ಕೃತಿಯ ಬಿಡುಗಡೆ ಸಮಾರಂಭ ಬೆಂಗಳೂರಿನಲ್ಲಿ ನಡೆದಾಗ ಹಿರಿಯ ಸಾಹಿತಿಗಳಾದ ಜಿ. ವೆಂಕಟಸುಬ್ಬಯ್ಯ, ಎಲ್. ಎಸ್. ಶೇಷಗಿರಿ ರಾವ್, ಮಾಜಿ ರಾಜ್ಯಪಾಲ ಡಾ. ರಾಮಾ ಜೋಯಿಸ್ ಭಾಗವಹಿಸಿದ್ದು ಸ್ಮರಣೀಯ. ಈ ಸಂದರ್ಭಗಳಲ್ಲಿ ರಾಮಮೋಹನ ರಾವ್ ನನಗೆ ಇನ್ನಷ್ಟು ಹತ್ತಿರವಾದರು.

ಭಾರತದ ಪ್ರಥಮ ಪ್ರಧಾನಮಂತ್ರಿ ನೆಹರೂರವರ ಭೇಟಿ ಮತ್ತು ಅವರ ಅಂತ್ಯ ಸಂಸ್ಕಾರದ ಕರ್ತವ್ಯವನ್ನು ನಿರ್ವಹಿಸಿದ ಬಗೆಯನ್ನು ರಾಮಮೋಹನ ರಾವ್ ಅವರು ಒಂದೆಡೆ ಹೃದಯಸ್ಪರ್ಶಿಯಾಗಿ ಬರೆದಿದ್ದಾರೆ. ಮುಂದೆ ಅವರ ಮೊಮ್ಮಗ ರಾಜೀವ್ ಗಾಂಧಿ ಸೇರಿದಂತೆ ವಿವಿಧ ಪ್ರಧಾನಿಗಳಿಗೆ ಮಾಧ್ಯಮ ಸಲಹೆಗಾರರಾಗಿ ರಾವ್ ಅವರು ರಾಷ್ಟ್ರದ ಐತಿಹಾಸಿಕ ಘಟನೆಗಳಿಗೆ ಪ್ರತ್ಯಕ್ಷ ಸಾಕ್ಷಿಯಾದರು.

ರಾಮಮೋಹನ ರಾವ್ ಅವರ ಮಹತ್ವದ ಕೃತಿ 'ಕಾಂಪ್ಲಿಕ್ಸ್ ಕಮ್ಯುನಿಕೇಶನ್'ನ ಬಿಡುಗಡೆ ಸಮಾರಂಭ ಮತ್ತು ಅವರಿಗೆ ಎಂ.ವಿ. ಕಾಮತ್ ಸ್ಮಾರಕ ಪ್ರಶಸ್ತಿ ಬಂದ ಘಳಿಗೆಯಲ್ಲಿ ಭಾಗಿಯಾಗಿ ನಾನು ಸಂಭ್ರಮಿಸಿದ್ದೇನೆ. ಇಲ್ಲಿ ನಡೆದ ಸಂವಾದದಲ್ಲಿ ಹಿರಿಯ ಪತ್ರಕರ್ತರು ಕೆಲವು ಸಂಗತಿಗಳನ್ನು ಬಹಿರಂಗಪಡಿಸಿದ್ದರು. ಪ್ರಾದೇಶಿಕ ಅಭಿವೃದ್ಧಿಗಾಗಿ ನರಸಿಂಹರಾವ್ ಸರಕಾರ 'ಎಂ.ಪಿ. ಲ್ಯಾಡ್ ಯೋಜನೆ' ಜಾರಿಗೆ ತರುವಲ್ಲಿ ಮತ್ತು ವಾಜಪೇಯಿ ಸರಕಾರದ ಕಾಲದಲ್ಲಿ ದೇಶದ ಹಲವೆಡೆ ತೆರೆಯಲಾದ ಸೈನಿಕ ಶಾಲೆಗಳ ಆರಂಭಕ್ಕೆ ರಾಮಮೋಹನ ರಾವ್ ಅವರ ಸಲಹೆ ಹೇಗೆ ಕಾರ್ಯರೂಪಕ್ಕೆ ಬಂದಿತ್ತು ಎಂದವರು ವಿವರಿಸಿದ್ದರು. ಇದು ರಾವ್ ಅವರ ದೂರದರ್ಶಿತ್ವಕ್ಕೆ ಒಂದೆರಡು ಉದಾಹರಣೆ. ನಮಗೆ ಇಂತಹ ಹಲವು ನಿದರ್ಶನಗಳು ಸಿಗಬಹುದು.

ದೇಶದ ಮಾಧ್ಯಮ ರಂಗದ ಬೆಳವಣಿಗೆಗೆ ವಿಶೇಷ ಕೊಡುಗೆ ನೀಡಿದ ರಾಮಮೋಹನ ರಾವ್ ಅವರಿಗೆ ಕರ್ನಾಟಕದ ರಾಜಕಾರಣಿಗಳ ಜೊತೆಗೂ ನಂಟಿತ್ತು. ರಾಮಕೃಷ್ಣ ಹೆಗಡೆ, ವೀರಪ್ಪ ಮೊಯಿಲಿ ಮತ್ತು ಆಸ್ಕರ್ ಫೆರ್ನಾಂಡಿಸ್ ಅವರು ಆಪ್ತರಾಗಿದ್ದರು. ಮೊಯಿಲಿಯವರು ತಮ್ಮ ವಕೀಲಿ ವೃತ್ತಿಯ ಆರಂಭವನ್ನು ನ್ಯಾಯವಾದಿಯಾಗಿದ್ದ ರಾಮಮೋಹನ ರಾಯರ ತಂದೆ ಇನ್ನ ಸುಬ್ಬರಾವ್ ಜೊತೆ ನಡೆಸಿದ್ದರು ಎಂದು ಒಮ್ಮೆ ತಿಳಿಸಿದ್ದರು. ಮುಂದೆ ಮೊಯಿಲಿಯವರು ದೇಶದ ಕಾನೂನು ಮಂತ್ರಿಯಾಗಿದ್ದು ಈಗ ಇತಿಹಾಸ. 'ಮೊದಲ ಬಾರಿಗೆ ನಾನು 1980ರಲ್ಲಿ ಲೋಕಸಭಾ ಸದಸ್ಯನಾಗಿ ದೆಹಲಿಗೆ ಬಂದಾಗ ನನಗೆ ಆತ್ಮೀಯರಾದ ರಾಜಧಾನಿಯ ಮೊದಲ ಕನ್ನಡಿಗ ರಾಮಮೋಹನ ರಾಯರು' ಎಂದು 'ಅದಮ್ಯ' ಕೃತಿಗೆ ಬರೆದ ಮುನ್ನುಡಿಯಲ್ಲಿ ಆಸ್ಕರ್ ಸ್ಮರಿಸಿದ್ದಾರೆ.

ಭಾರತೀಯ ಸೈನ್ಯದ ವಕ್ತಾರನಾಗಿ, ಭಾರತ-ಪಾಕಿಸ್ತಾನ ಯುದ್ಧಗಳ ಸೈನ್ಯದ ಬಾತ್ಮೀದಾರನಾಗಿ, ವಿಶ್ವಸಂಸ್ಥೆಯ ತುರ್ತುಪಡೆಯ ಸಂಪರ್ಕಾಧಿಕಾರಿಯಾಗಿ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಜವಾಬ್ದಾರಿಗಳನ್ನು ರಾಮಮೋಹನ ರಾವ್ ನಿಭಾಯಿಸಿದ್ದರು. ಹೀಗೆ ಇದ್ದ ರಾವ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಮತ್ತು ಅದರ ನೂತನ ಕಟ್ಟಡ ಸಮಿತಿಯ ಅಧ್ಯಕ್ಷರಾಗಿ, ಕರ್ಣಾಟಕ ಬ್ಯಾಂಕಿನ ನಿರ್ದೇಶಕರಾಗಿ, ತುಳು ಕೂಟಗಳ ಮುಖಂಡರಾಗಿ ಇರಲು ಸಮಯ ಇರುತ್ತಿತ್ತು. ಇದು ಅವರ ನಾಡು-ನುಡಿಯ ಬಗೆಗಿನ ಪ್ರಾಮಾಣಿಕ ಪ್ರೀತಿಯನ್ನು ವ್ಯಕ್ತಪಡಿಸಿದೆ.

ಎಂಭತ್ತರ ವಯಸ್ಸಿನಲ್ಲೂ ರಾಮಮೋಹನ ರಾವ್ ಅವರು ಏಷ್ಯಾದ ಅತಿ ದೊಡ್ಡ ಸುದ್ದಿ ಸಂಸ್ಥೆ ಎ.ಎನ್.ಐ. ಇದರ ಸಂಪಾದಕರಾಗಿ ದುಡಿಯುತ್ತಿದ್ದರು. ಆದರೆ ಪ್ರಶಸ್ತಿ, ಪುರಸ್ಕಾರ, ಪ್ರಚಾರಗಳಿಂದ ದೂರ ಉಳಿದಿದ್ದರು. ನಾನು ಅವರ ಕುರಿತು ಪುಸ್ತಕ ತರುವ ಪ್ರಸ್ತಾಪ ಮಾಡಿದಾಗ ಆರಂಭದಲ್ಲಿ ಅವರು ಆಸಕ್ತಿ ತೋರಿಸಲಿಲ್ಲ. ಈ ನಿರ್ಲಿಪ್ತ ಭಾವದಿಂದಲೇ ಪ್ರಶಸ್ತಿಗಳು ಅವರನ್ನು ಅರಸಿ ಬರಲಿಲ್ಲ. ಈಚೆಗೆ ಅವರು ಅಗಲಿದಾಗ ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್‌ನ ಅಧಿನಾಯಕಿ ಸೋನಿಯಾ ಗಾಂಧಿ, ಸಚಿವ ವೆಂಕಯ್ಯ ನಾಯ್ಡು, ರಾಹುಲ್ ಗಾಂಧಿ ಸೇರಿದಂತೆ ಗಣ್ಯರು ರಾಮಮೋಹನ ರಾವ್ ಅವರ ಕಾರ್ಯಕ್ಷಮತೆಯನ್ನು ಶ್ಲಾಘಿಸಿ ಸಂತಾಪ ವ್ಯಕ್ತಪಡಿಸಿದ್ದಾರೆ. ಇದು ಇನ್ನ ರಾಮಮೋಹನ ರಾವ್ ಅವರು ಎಲ್ಲ ಬಗೆಯ ಪ್ರಶಸ್ತಿಗಳನ್ನು ಮೀರಿ ನಿಂತಿದ್ದರು ಎಂಬುದನ್ನು ಸಾರಿ ಹೇಳಿದೆ. ಭಾರತ ಕಂಡ ಶ್ರೇಷ್ಠ ಸಂವಹನಕಾರ ಇನ್ನು ಕೇವಲ ನೆನಪು. ಅ

***ಡಾ. ವೈ. ಅವನೀಂದ್ರನಾಥ್ ರಾವ್***





# ಕಾಣದ ತಂತಿ

ಅಭಿಮತದ ಜೂನ್ ಸಂಚಿಕೆ ಮುದ್ರಣಕ್ಕೆ ಹೋಗಲು ನನ್ನ ಲೇಖನಕ್ಕಾಗಿ ಕಾಯುತ್ತಿರುವ ವಿಚಾರವನ್ನು ದೆಹಲಿ ಕರ್ನಾಟಕ ಸಂಘದ ಮ್ಯಾನೇಜರ್ ಕರೆ ಸತ್ಯದ ಅರಿವಿದ್ದ ನನ್ನನ್ನು ಎಚ್ಚರಿಸಿದೆ. ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ್ ಇಬ್ಬರೂ ಸಹ ರಾಮಮೋಹನ್ ರಾವ್ ಅವರಿಗೆ ಅರ್ಥಪೂರ್ಣ ಶ್ರದ್ಧಾಂಜಲಿ ಅರ್ಪಿಸುವ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅಭಿಮತದ ವಿಶೇಷ ಸಂಚಿಕೆ ಅದರ ಮೊದಲ ಕಂತು. ಹೌದು. ಹಿರಿಯಚೇತನರಾಗಿದ್ದ ರಾಮಮೋಹನ ರಾವ್ ಅವರನ್ನು ದೆಹಲಿಯ ಕನ್ನಡಿಗರು ಯಾವ ರೀತಿಯಲ್ಲಿ ನೆನಪಿಸಿಕೊಂಡರೂ ಕಡಿಮೆಯೇ. ರಾಮಮೋಹನ ರಾವ್ ಇಹಲೋಕ ತ್ಯಜಿಸಿದ್ದಾರೆಂಬುದು ಅವರ ಅಂತ್ಯ ಸಂಸ್ಕಾರದಲ್ಲಿ ಪಾಲುಗೊಂಡ ನನಗೆ ತಿಳಿದಿತ್ತು. ಆದರೆ ನನ್ನ ಒಳಮನಸು ಅದನ್ನು ಒಪ್ಪುವುದಕ್ಕೆ ಸಿದ್ಧವಿರಲಿಲ್ಲ.

ಇವತ್ತು ಸಂಜೆ ನಾಲ್ಕು ಗಂಟೆಗೆ ಸಂಘಕ್ಕೆ ಹೋಗಬೇಕು; ಶೇಖರ ಬಂಗೇರರ ಕರ್ನಾಟಕ ಫುಡ್ ಸೆಂಟರಿನ ಹೊರಗೆ ಕಾದಿರಬೇಕು. ಸುಮಾರು ನಾಲ್ಕು ಗಂಟೆಗೆ ಕಾರೊಂದು ಬಂದು ಕ್ಯಾಂಟೀನಿಗೆ ಹೋಗುವ ದ್ವಾರದ ಬಳಿ ನಿಂತು, ಅದರ ಡ್ರೈವರ್ ಕಾರಿನಿಂದ ಕೆಳಗಿಳಿದು ಹಿಂದಿನ ಸೀಟಿನ ಬಾಗಿಲು ತೆರೆಯುವ ಮುನ್ನವೇ ನಾನೇ ಬಾಗಿಲು ತೆರೆದು 'ನಮಸ್ಕಾರ ಸಾರ್' ಎಂದಾಗ, ಸೀಟಿನಿಂದ ಮೆಲ್ಲಗೆ ತಿರುಗಿ ಎಡಗೈಯಲ್ಲಿ ಎದುರಿನ ಸೀಟನ್ನು ಹಿಡಿದು ಎಡಗಾಲನ್ನು ಕಾರಿನಿಂದ ಹೊರಕ್ಕಿಳಿಸಿ ಬಲಗೈಯಲ್ಲಿ ಬಾಗಿದ ನನ್ನ ಭುಜ ಹಿಡಿದು ಮೃದು ದನಿಯಲ್ಲಿ 'ಎಂಚ ಉಳ್ಳರ್' ಅನ್ನುತ್ತ ಕಾರಿನಿಂದ ಕೆಳಗಿಳಿಯುವ ರಾಮಮೋಹನ ರಾವ್ ಜೊತೆಗೆ ಮಾತನಾಡುತ್ತ ಆರು ಜನ ಕೂಡುವ ಟೇಬಲ್ ಬಳಿಯೇ ಕುಳಿತಾಗ 'ಬೆತ್...' (ಮತ್ತೆ...) ಅಂತ ಅವರೇ ಆರಂಭಿಸಿ ಕಾಫಿ ಸವಿಯುವ ತನಕದ ಹತ್ತಾರು ನಿಮಿಷಗಳ ಮಾತುಕತೆ; ನಂತರ ಅವರನ್ನು ಕಾರಿನ ತನಕ ಕಳುಹಿಸಿ ಕಾರೊಳಗೆ ಕೂರಿಸಿ ಕೈಮುಗಿದು, ಆ ಕಾರು, ದೃಷ್ಟಿಯಿಂದ ಮಾಸುವ ವರೆಗೂ ನೋಡುತ್ತ, 'ಗ್ರೇಟ್' ಎಂದು ರಾಮಮೋಹನ ರಾವ್ ಅವರ ಬಗ್ಗೆ ಯೋಚಿಸುತ್ತಿರುವಾಗಲೇ, ಸಂಘದಲ್ಲಿರುವ ಯಾರಾದರೂ ನನ್ನನ್ನು ಆ ಭಾವ ಪ್ರಪಂಚದಿಂದ ಈಚೆಗೆ ಕರೆತರುತ್ತಿದ್ದುದು ಸಾಮಾನ್ಯವೇ ಆಗಿತ್ತು ಆದ್ದರಿಂದ ರಾಮಮೋಹನ ರಾಯರು ಸಂಘದಲ್ಲೆ ನನಗೆ ಯಾವತ್ತಾದರೂ ಸಿಕ್ಕೇ ಸಿಗುತ್ತಾರೆ ಎಂಬ ನಂಬಿಕೆ ಅವರು ಇನ್ನಿಲ್ಲ ಎಂಬ ವಾಸ್ತವಿಕತೆಯನ್ನು ಮೆಟ್ಟಿ ನಿಂತಿದೆ.

ಆಗೊಮ್ಮೆ ಈಗೊಮ್ಮೆ ನಮ್ಮ ಆ ಕಾಫಿ ಸಮಯದಲ್ಲಿ ನನ್ನ ಮನೆ, ಚಟುವಟಿಕೆ ಎಲ್ಲ ವಿಷಯಗಳ ಬಗ್ಗೆ ವಿಚಾರಿಸುತ್ತಿದ್ದರು. ಆದರೆ ಎಂದೂ ಸಲಹೆ ನೀಡುತ್ತಿರಲಿಲ್ಲ. ಆಗೊಮ್ಮೆ ಈಗೊಮ್ಮೆ ಸಂಘದ ಬಗ್ಗೆ ವಿಚಾರಿಸುತ್ತಿದ್ದರು. ಬೆಕ್ಕಿನ ತಲೆಯ ಮೇಲೆ ದೀಪ ಇಡುವ ನನ್ನ ಮಾತಿನ ಅಸ್ಪಷ್ಟತೆಯ ಗೋಜಲಲ್ಲೆ ಸ್ಪಷ್ಟತೆಯ ಜಾಡನ್ನು ಹಿಡಿದ ರಾಮಮೋಹನ ರಾಯರ ಮುಖಭಾವ, ಅವರಿಗೆ ವಿಷಯ ಅರ್ಥವಾಗಿದೆ ಎಂಬುದನ್ನು ನನಗೆ ಸ್ಪಷ್ಟ ಪಡಿಸುತ್ತಿತ್ತು. ಹಾಗೆಂದು ಹೊರಗಿನ ಯಾವ ವಿಚಾರಗಳ ಬಗ್ಗೆ ನಾವು ಯಾವತ್ತೂ ಮಾತನಾಡುತ್ತಿರಲಿಲ್ಲ. ಬದುಕಿನ ಲವಲವಿಕೆ ಇತ್ತೀಚೆಗೆ ಅವರ ಪುತ್ರ ತೀರಿ ಹೋಗುವ ತನಕವೂ ಅವರಲ್ಲಿ ಕಂಡಿದ್ದೆ.

ಸಂಘದಲ್ಲಿ ಸಭಾಂಗಣ ಮಾತ್ರ ಸಾಕೇ ಅಥವಾ ಒಂದು ಸಾಂಸ್ಕೃತಿಕ ಸಮುಚ್ಚಯ ಬೇಕೇ ಎಂಬ ವಿಚಾರದಲ್ಲಿ ಸಿಕ್ಕಿದ ಮಾಹಿತಿ ಹಳೆಯ ಕಟ್ಟಡಕ್ಕೆ ಒಂದು ಸಭಾಂಗಣ ಸೇರಿಸುವುದಕ್ಕಷ್ಟೆ ಸೀಮಿತವಾಗಿದ್ದಾಗ ರಾಮಮೋಹನ ರಾವ್ ಅವರಿಗೆ ಎಲ್ಲಾ ಮಾಹಿತಿ ನೀಡಿ ಅವರ ಮನವೊಲಿಸಲು ಕೆ.ಆರ್. ನಾಗರಾಜರು ನನ್ನನ್ನೇ ನೇಮಿಸಿದ್ದರು.

ಇಪ್ಪತ್ತೈದು ವರ್ಷಗಳ ಹಿಂದೆ, ದೆಹಲಿ ಕರ್ನಾಟಕ ಸಂಘದ ಚುನಾವಣಾ ಅಭಿಯಾನ ಪ್ರಾರಂಭವಾಗಿದ್ದು ರಾಮಮೋಹನ ರಾವ್ ಅವರ ಮನೆಯಿಂದ. ಹಿರಿಯರಾದ ಗೋಪಾಲ ಶಾಸ್ತ್ರಿ, ಕೆ.ಆರ್. ನಾಗರಾಜ, ಎಚ್.ಎಸ್. ಕುಲಕರ್ಣಿ, ಸುಬ್ಬಯ್ಯ, ಡಾ. ಅಹಲ್ಯಾ ಚಿಂತಾಮಣಿ, ಸುಮಿತ್ರಾ ರಾವ್, ಎಂ.ಎಸ್. ಸಾಂತೂರ್, ಕಾರಂತ್, ಯು. ಪ್ರಭಾಕರ ರಾವ್ ಹೀಗೆ ದೆಹಲಿಯ ಗಣ್ಯಾತಿಗಣ್ಯರು ಸಂಘದ ಚುನಾವಣೆಗೆ ತಂಡವನ್ನು ಕಟ್ಟಿದ್ದು, ಪ್ರಥಮ ಬಾರಿಗೆ ಸಂಘದ ಅಧ್ಯಕ್ಷರಾಗಿ ಹಿರಿಯ ನಿವೃತ್ತ ಐಎಎಸ್ ಅಧಿಕಾರಿ ಶ್ರೀ ಎ.ಪಿ. ಕುಮಟಾಕರ್, ಉಪಾಧ್ಯಕ್ಷರಾಗಿ ಸ್ವತಹ ರಾಮಮೋಹನ ರಾವ್ ಮತ್ತು ಡಾ. ಅಹಲ್ಯಾ ಚಿಂತಾಮಣಿ, ಪ್ರಧಾನ ಕಾರ್ಯದರ್ಶಿಯಾಗಿ ನಾನು ಮತ್ತು ಖಜಾಂಚಿಯಾಗಿ ಶ್ರೀ ಗಣೇಶ್ ಕಣಕ್ಕೆ ಇಳಿದಿದ್ದೆವು. ಚುನಾವಣಾ ಭರಾಟೆ–ಪ್ರಚಾರ–ಹೋರಾಟಗಳಲ್ಲಿ ಸದಾ ಸಂಯಮ ಮತ್ತು ಘನತೆ ಕಾಪಾಡುವಂತೆ ರಾಮಮೋಹನ ರಾವ್ ಎಲ್ಲರನ್ನು ಎಚ್ಚರಿಸುತ್ತಿದ್ದುದು ನನ್ನ ಕಣ್ಣಿಗೆ ಕಾಣುವ ದೃಶ್ಯಗಳು. ಚುನಾವಣೆಯಲ್ಲಿ ನಾವೆಲ್ಲಾ ಗೆದ್ದರೂ ಎಲ್ಲರನ್ನು ಒಳಗೊಳ್ಳುವ ಹಾಗೂ ಸೋತವರನ್ನೂ ನಮ್ಮೊಂದಿಗೆ ಕರೆದೊಯ್ಯುವ ಪಾಠ ಕಲಿಸಿದವರು ಗೋಪಾಲ ಶಾಸ್ತ್ರಿ ಹಾಗೂ ರಾಮಮೋಹನ ರಾಯರು. ಸುಮಾರು ಮೂರು ವರ್ಷಗಳ ಕಾಲದ ಆ ಅವಧಿಯಲ್ಲಿ ನಾನು ಪ್ರಧಾನ ಕಾರ್ಯದರ್ಶಿಯಾಗಿ, ವಿಷಯವನ್ನು ಸಮಚಿತ್ತದಿಂದ ನೋಡುವ ಹಾಗೂ ಅದನ್ನು ವಿಶ್ಲೇಷಿಸುವ ತಂತ್ರಗಾರಿಕೆ ಕಲಿತದ್ದು ರಾಮಮೋಹನ ರಾಯರಿಂದ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಸಂಘದ ಅಧ್ಯಕ್ಷರಾಗಿ ಕುಮಟಾಕರ್ ಅವರಿದ್ದರೂ, ಘಟಾನುಘಟಿಗರಿದ್ದ ಕಾರ್ಯಕಾರಿ ಸಭೆಯಲ್ಲಿ ಸಂಘವನ್ನು ಹಿಂದೆಂದೂ ಕಂಡಿರದ ನನಗೆ ಕೈ ಹಿಡಿದು ನಡೆಸಿ, ನನ್ನನ್ನು ಬೆಳೆಸಿದ ರೀತಿ ಅನುಪಮ. ಸಂಘದ ರಾಜಕೀಯದ ಒಂದೊಂದು ಅಂಶಗಳನ್ನು ಅವರಿಗೆ ವಿವರಿಸುತ್ತಿದ್ದೆ. ಸೂಕ್ಷ್ಮಗ್ರಾಹಿಗಳಾದ ಅವರು ಒಳಸುಳಿವುಗಳನ್ನು ಅರಿತುಕೊಳ್ಳುತ್ತಿದ್ದರು. ಯಾವ ಸಭೆಯಾದರೂ, ಭಿನ್ನಾಭಿಪ್ರಾಯಗಳ ವಾಕ್‌ಪ್ರವಾಹದಲ್ಲಿ ಸಿಲುಕಿದಾಗ, ನಿರ್ಣಯದ ದಡ ಸಾಗಿಸುತ್ತಿದ್ದ ಅಂಬಿಗ ರಾಮಮೋಹನ ರಾವ್. ಘನತೆಯನ್ನು ಕಾಪಾಡಿಕೊಂಡೇ ಎದುರಾಳಿಯನ್ನು ಮಣಿಸುವ ರಾಮಮೋಹನ ರಾವ್ ಅವರ ಶೈಲಿಗೆ ನಾನು ಮಾರು ಹೋಗಿದ್ದೇನೆ. ಅಷ್ಟಾದರೂ ಮಣಿದ ಎದುರಾಳಿ ಅವರನ್ನು ಮೆಚ್ಚುವ ಬಗೆ ಮಾತ್ರ ನನ್ನ ಕಲ್ಪನೆಗೆ ಮೀರಿದೆ.

ಸಂಘದಲ್ಲಿ ಸಭಾಂಗಣ ಮಾತ್ರ ಸಾಕೇ ಅಥವಾ ಒಂದು ಸಾಂಸ್ಕೃತಿಕ ಸಮುಚ್ಚಯ ಬೇಕೇ ಎಂಬ ವಿಚಾರದಲ್ಲಿ ಸಿಕ್ಕಿದ ಮಾಹಿತಿ ಹಳೆಯ ಕಟ್ಟಡಕ್ಕೆ ಒಂದು ಸಭಾಂಗಣ ಸೇರಿಸುವುದಕ್ಕಷ್ಟೆ ಸೀಮಿತವಾಗಿದ್ದಾಗ ರಾಮಮೋಹನ ರಾವ್ ಅವರಿಗೆ ಎಲ್ಲಾ ಮಾಹಿತಿ ನೀಡಿ ಅವರ ಮನವೊಲಿಸಲು ಕೆ.ಆರ್. ನಾಗರಾಜರು ನನ್ನನ್ನೇ ನೇಮಿಸಿದ್ದರು. ಕೇವಲ ಎರಡೂವರೆ ನಿಮಿಷ ಮಾತ್ರ ಕೇಳಿದ ರಾಮಮೋಹನ ರಾವ್, ಸರಿ, ನಿಮ್ಮಲ್ಲಿ ದೊಡ್ಡದೊಂದು ಯೋಜನೆಯೆ ಇದೆ, ನೋಡೋಣ ಎಂದಷ್ಟೇ ಹೇಳಿದರೂ, ನಾಲ್ಕು ವರ್ಷದ ನಂತರದ ದಿನಗಳಲ್ಲಿ ಸಾಂಸ್ಕೃತಿಕ ಸಮುಚ್ಚಯದ ಚೇರ್ಮನ್ ಆಗಿ ಮುನ್ನಡೆಸಿದರು.

1994ರಲ್ಲಿ ರಾಷ್ಟ್ರಪತಿ ಭವನದಲ್ಲಿ ಧರ್ಮಸ್ಥಳ ಮೇಳದ ಯಕ್ಷಗಾನದ ಆಯೋಜನೆಗೆ ರಾಷ್ಟ್ರಪತಿ ಭವನದ ಜೊತೆ ಸಂಪರ್ಕ ನಡೆಸುವಲ್ಲಿ ಹೆಜ್ಜೆ ಹೆಜ್ಜೆಗೂ ಮಾರ್ಗದರ್ಶನ ನೀಡಿದರು. ತಮ್ಮ ಪ್ರಭಾವಲಯದ ಬಳಕೆಯ ಮೂಲಕ, ಕರ್ನಾಟಕದಿಂದ ಬಂದ ಅನೇಕರಿಗೆ ಸಹಾಯ ಮಾಡುತ್ತಿದ್ದರು. ಉದ್ಯೋಗ ದೊರಕಿಸಿ ಕೊಡುವುದೂ ಸೇರಿದಂತೆ ನಾನು ಕೇಳಿದ ಯಾವುದೇ ಸಹಾಯಕ್ಕೂ ಇಲ್ಲ ಎಂದವರಲ್ಲ. ಸಂಘ ಮತ್ತು ಕರ್ನಾಟಕ ಬ್ಯಾಂಕಿನ ಸೌಹಾರ್ದ ಸಂಬಂಧದ ಶಿಲ್ಪಿಯಾದ ರಾಮಮೋಹನ ರಾವ್ ದೆಹಲಿ ಕರ್ನಾಟಕ ಸಂಘದಲ್ಲಿ ಅಧ್ಯಕ್ಷರಾಗಿದ್ದುದು ಒಂದೇ ಅವಧಿಗಾದರೂ ಸಾಮಾನ್ಯ ಸದಸ್ಯನಾಗಿಯೇ ನಮ್ಮೆಲ್ಲರ ಗೌರವಕ್ಕೆ ಪಾತ್ರರಾಗಿದ್ದರು. ಬಹಳಷ್ಟು ಮಾತನಾಡಿ ನಮ್ಮನ್ನು ಅರ್ಥ ಮಾಡಿಕೊಳ್ಳದವರ ನಡುವೆ, ಏನೂ ಮಾತನಾಡದೆ ಅರ್ಥಮಾಡಿಕೊಂಡ ರಾಮಮೋಹನ ರಾವ್ ಬಹಳ ಎತ್ತರದ ವ್ಯಕ್ತಿಯಾಗಿಯೇ ನನಗೆ ಕಾಣಿಸುತ್ತಾರೆ. ಕಳೆದ 25 ವರ್ಷಗಳ ನನ್ನ ಸಂಘ–ಶಾಲೆ–ಸಾಮಾಜಿಕ ಕೆಲಸಗಳ ವಿಚಾರವಾಗಿ ಕಾಣದ ತಂತಿಯೊಂದು ನಮ್ಮಿಬ್ಬರ ನಡುವೆ ನಿರಂತರ ಸಂಪರ್ಕ ಏರ್ಪಡಿಸಿದ್ದರಿಂದಲೇ ಬದುಕಿನ ಮುಂದಿನ ಹಾದಿಗೂ ಈ 'ಕಾಣದ ತಂತಿ'ಯೇ ನಮ್ಮಿಬ್ಬರನ್ನು ಮಾತನಾಡಿಸುತ್ತದೆ. ಅ

***ಸರವು ಕೃಷ್ಣ ಭಟ್***

# ಮಾಧ್ಯಮ ಕ್ಷೇತ್ರದ ಅನಭಿಷಿಕ್ತ ಆಚಾರ್ಯರು ರಾಮಮೋಹನರಾಯರು

ಪರತಂತ್ರ, ಸ್ವತಂತ್ರ ಹಾಗೂ ಅತಂತ್ರ ಭಾರತದ ಸಾಕ್ಷಿಯಾಗಿದ್ದವರು ರಾಮಮೋಹನರಾಯರು. ಸ್ವಾತಂತ್ರ್ಯ ಲಭಿಸಿದ ಹೊಸತರಲ್ಲಿಯೇ ಭಾರತ ಸರ್ಕಾರದ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡಿದ್ದವರು ಅವರು. ಅವರೊಬ್ಬರು ಅನನ್ಯ ಅನುಭವಗಳ, ನೈಜ ನೆನಪುಗಳ ಗಣಿಯಾಗಿದ್ದವರು. ಅದರಿಂದಲೇ ಅವರ ಮುಖದಲ್ಲಿ ಸದಾ ಅತ್ಯಂತ ಗಂಭೀರವಾದ ಮುಗುಳ್ನಗೆ ಇರುತ್ತಿತ್ತು; ಆ ನಗೆಯಲ್ಲಿ, ತೀವ್ರವಾಗಿ ಗಮನಿಸಿದರೆ ಪರಿಸ್ಥಿತಿಯ ವಿಷಮತೆಯ ಬಗೆಗಿನ ವಿಷಾದದ ಸುಳಿಯೂ ಕಾಣುತ್ತಿತ್ತು. ಆಗತಾನೇ ಶಾಲಾಕಾಲೇಜು ವಿದ್ಯಾಭ್ಯಾಸ ಮುಗಿಸಿ ಉತ್ಸಾಹದಿಂದ ಪುಟಿಯುತ್ತಿದ್ದ ಎಳೆಯ ಮಾಧ್ಯಮ ಕಾರ್ಯಕರ್ತರಿಗೆ ಮಾರ್ಗದರ್ಶನ ಮಾಡುವಾಗ ಅವರ ಪ್ರಬುದ್ಧ ಅನುಭವ ಸದಾ ಆಸರೆಯಾಗಿರುತ್ತಿತ್ತು. ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಪ್ರಭುತ್ವದ ಸಾಮಿಪ್ಯದಲ್ಲಿದ್ದರೂ ಒಮ್ಮೆಯೂ ಅವರಲ್ಲಿ ಅಹಂಕಾರ ಸುಳಿದಿರಲಿಲ್ಲ. ಬದಲಿಗೆ ಸುಸ್ಥಿರ ಭಾರತದ ಸಂಸ್ಥಾಪನೆಗೆ ತಮ್ಮ ಪರಿಕಲ್ಪನೆಗಳನ್ನು ಅಧಿಕಾರಸ್ಥ ಜನರಿಗೆ ಸಂವಹನಿಸುತ್ತ ಸಾರ್ಥಕ ಜೀವನ ನಡೆಸಿದರು. ಅವರನ್ನು ವೈಯಕ್ತಿಕವಾಗಿ ಬಲ್ಲ ನನಗೆ ಅವರ ಅಗಲಿಕೆ ತೀವ್ರ ವಿಷಾದ ಮೂಡಿಸಿದೆ. ನಮ್ಮ ದೇಶದ ಆಗುಹೋಗುಗಳ ಜೀವಂತ ಸಾಕ್ಷಿಯೊಂದು ಕಣ್ಮರೆ ಆದದ್ದರ ಬಗ್ಗೆ ಬೇಸರ ಮೂಡಿದೆ.

ನಾನು ಮುಖ್ಯಮಂತ್ರಿ ಜೆ.ಹೆಚ್. ಪಟೇಲರ ಪತ್ರಿಕಾ ಕಾರ್ಯದರ್ಶಿಯಾಗಿದ್ದ ದಿನಗಳು ನನಗೆ ನೆನಪಾಗುತ್ತವೆ. ಮುಖ್ಯಮಂತ್ರಿಯವರ ಜತೆ ದೆಹಲಿಗೆ ತೆರಳಿದಾಗಲೆಲ್ಲಾ ನಾನು ನಮ್ಮ ಮಾಧ್ಯಮ ಕ್ಷೇತ್ರದ ಅನಭಿಷಿಕ್ತ ಆಚಾರ್ಯರಾದ ರಾಮಮೋಹನರಾಯರನ್ನು ಭೇಟಿಯಾಗುತ್ತಿದ್ದೆ. ಆ ಸಂದರ್ಭದಲ್ಲಿ ಅವರು ನನ್ನನ್ನು ಸದಾ ತಿದ್ದುತ್ತಿದ್ದರು; ಮುಂದಡಿಯಿಡುವಾಗ ವಹಿಸಬೇಕಾದ ಎಚ್ಚರದ ಬಗ್ಗೆ ತಿಳಿಹೇಳುತ್ತಿದ್ದರು. ನಾನು ಅವರಿಂದ ಕಲಿತದ್ದು ಬಹಳ. 'ಮುಖ್ಯಮಂತ್ರಿಗಳ ಪತ್ರಿಕಾ ಕಾರ್ಯದರ್ಶಿಯ ಕೆಲಸ, ಮಾಧ್ಯಮ ಹಾಗೂ ಮುಖ್ಯಮಂತ್ರಿಗಳ ನಡುವೆ ಸಂಪರ್ಕ ಸೇತುವೆಯಾಗುವುದು ಹಾಗೂ ರಾಸಾಯನಿಕ ಪ್ರಕ್ರಿಯೆಯಲ್ಲಿ 'ವೇಗವರ್ಧಕ'ದಂತೆ ವರ್ತಿಸಿ ಅಂತಿಮವಾಗಿ ಮನಃಪಟಲದಲ್ಲಿ ಮುಖ್ಯಮಂತ್ರಿ ಮಾತ್ರ ಅಚ್ಚಳಿಯದಂತೆ ಉಳಿದುಕೊಳ್ಳಲು ಶ್ರಮಿಸಬೇಕು', ಎಂದು ಅವರು ನನಗೆ ಹೇಳುತ್ತಿದ್ದರು. ಕಡಿಮೆ ಅಂದರೆ ನಾಲ್ಕು ಪ್ರಧಾನಮಂತ್ರಿಗಳ ಮಾಧ್ಯಮ ಸಲಹೆಗಾರರಾಗಿ 'ವೇಗವರ್ಧಕ' ಸ್ಥಾನದಲ್ಲಿ ಅಭೂತಪೂರ್ವವಾಗಿ ಕರ್ತವ್ಯ ನಿರ್ವಹಿಸಿದ ರಾಮಮೋಹನರಾಯರ ಸನ್ಮಾರ್ಗದರ್ಶನ ನನ್ನ ವ್ಯಕ್ತಿತ್ವವನ್ನೇ ಬದಲಿಸಿತು. ಇಂದಿಗೂ ಕೂಡ ನನ್ನ ಹಿರಿಯ ಪತ್ರಕರ್ತ ಮಿತ್ರರು ಎದುರಾದಾಗ–'ನಿನ್ನ ಅವಧಿಯಲ್ಲಿ ಚೆನ್ನಾಗಿ ಕೆಲಸ ಮಾಡಿದೆ ಬ್ರದರ್', ಎಂದು ಪ್ರಶಂಸಿಸಿದಾಗ ನಾನು ಮೊದಲು ಸಲ್ಲಿಸುವ ಕೃತಜ್ಞತೆ ರಾಮಮೋಹನರಾಯರಿಗೆ. ಅವರು ಕೊಟ್ಟ ಸುಳಿವು, ಒಳಸುಳಿವು ಹಾಗೂ ಅರ್ಥಪೂರ್ಣ ಒಳನೋಟಗಳಿಂದ ಸದ್ದಿಲ್ಲದೆ ನನಗೆ ದಕ್ಕಿದ್ದ 'ಗದ್ದುಗೆ'ಗೆ ನ್ಯಾಯ ಒದಗಿಸಲು ನನಗೆ ಪ್ರೇರಣೆ ನೀಡಿದವು.

ರಾಮಮೋಹನರಾಯರು ಸಾಗುತ್ತಿದ್ದ ಹಡಗನ್ನೇ ಏರಿದ್ದವನು ನಾನು. ಸರ್ಕಾರಿ ಸ್ವಾಮ್ಯದ ದೂರದರ್ಶನದಲ್ಲಿ ಕಾರ್ಯಕ್ರಮ ರೂಪಿಸುವಾಗ ಇತ್ತ ಸರ್ಕಾರದ ಮುಖವಾಣಿಯಾಗಲೇಬೇಕಿತ್ತು; ಅತ್ತ ಜನರ ಕಳಕಳಿಗೂ ದನಿಯಾಗಬೇಕಿತ್ತು. ರಾಯರ ಅತ್ಯದ್ಭುತ ಕೃತಿ ಕಾಂಪ್ಲಿಕ್ಸ್ ಕಮ್ಯುನಿಕೇಶನ್–ಕ್ರಾನಿಕ್ಲಸ್ ಆಫ್ ಎ ಕಮ್ಯೂನಿಕೇಟರ್‌ನ ಬಿಡುಗಡೆಯ ಸಂದರ್ಭದಲ್ಲಿ ಅವರಾಡಿದ್ದ ಮಾತುಗಳು ನನ್ನಂತಹ ಸರ್ಕಾರಿ ಸ್ವಾಮ್ಯದ ಮಾಧ್ಯಮದಲ್ಲಿ ಕೆಲಸ ಮಾಡುವವರಿಗೆ ನಿಜಕ್ಕೂ ಮಾರ್ಗದರ್ಶಿಯಾಗಿ ಸದಾಕಾಲ ಸ್ಫೂರ್ತಿಯ ಸೆಲೆಯಾಗಿ ನಿಲ್ಲುತ್ತವೆ; 'ಭಾರತೀಯ ಪ್ರಸಾರ ಸೇವೆ ಸರ್ಕಾರದ ಅವಿಚ್ಛಿನ್ನ ಬಾಗ. ದೇಶದ ಪತ್ರಕರ್ತರು ನನ್ನನ್ನು ಸರ್ಕಾರದ ಭಾಗವೆಂದು ಭಾವಿಸಿದ್ದರು. ಆಗ ನಾನು ಈರ್ವರ ಕಾಳಜಿಗಳನ್ನು ಪರಸ್ಪರರಿಗೆ ಸಂವಹನಿಸುವ ಕೊಂಡಿಯಾದೆ'. ರಾಮಮೋಹನರಾಯರೇ ಹೇಳುವಂತೆ 1965ರ ಕದನ, 1971 ರ ಕದನ ಹಾಗೂ ಉಗ್ರಗಾಮಿ ಚಟುವಟಿಕೆಗಳು–ಈವೆಲ್ಲದ್ದರಿಂದ ದೇಶದಲ್ಲಿ ಶಾಂತಿ ಲಯವಾಗತೊಡಗಿತು. ನಿಜ ಹೇಳಬೇಕೆಂದರೆ ಒಂದು ಸಂಘರ್ಷದಿಂದ ಮತ್ತೊಂದು ಸಂಘರ್ಷಕ್ಕೆ, ಮತ್ತೊಂದು ಸಂಘರ್ಷದಿಂದ ಮೆಗುದೊಂದು ಸಂಘರ್ಷಕ್ಕೆ ನಮ್ಮ ಭೀಕರ ಪಯಣ ಸಾಗಿದೆ. ಇಂಥ ಸಂದರ್ಭದಲ್ಲಿ ಪತ್ರಕರ್ತರ ನೈಜ ಜನಪರ ಕಳಕಳಿ ಹಾಗೂ ಸರ್ಕಾರದ ಅನಿವಾರ್ಯತೆಗಳನ್ನು ಪರಸ್ಪರರಿಗೆ ಸಂವಹನಿಸುವ ಸಮತೋಲನದ ವ್ಯಕ್ತಿಯ ಅಗತ್ಯವಿದೆ. ರಾಮಮೋಹನರಾಯರ ಗೈರುಹಾಜರಿಯಲ್ಲಿ ಈ ಗುರುತರ ಜವಾಬ್ದಾರಿಯನ್ನು ಹೊರುವ ಸಮರ್ಥರು ಯಾರೂ ಇಲ್ಲ ಎಂಬುದೇ ದುರಂತ. ಅ

**ಆರ್. ಭರತಾದ್ರಿ**



# ಹೊರನಾಡ ಕನ್ನಡಿಗರಾಗಿ ನಾಲ್ಕೈದು ದಶಕಗಳ ಒಡನಾಟದ ಸ್ನೇಹವನ್ನುಳಿಸಿ ಕೊಂಡ ರಾಮಮೋಹನ ರಾಯರು



**ಇ**ವತ್ತು ಅವರು ಭಾರತ ದೇಶದ ಅಮರ ಪುತ್ರ! ತ
**ನ್ನ** ತನವನ್ನುಳಿಸಿಕೊಂಡು ಸಜ್ಜನಿಕೆ, ಸದ್ಭಾವನೆ
ಸಂಯಮದಿಂದ
**ರಾ**ರಾಜಿಸುತ್ತಾ ಹೊರನಾಡ ಕನ್ನಡ ಪುತ್ರ ಶಿರೋ
**ಮ**ಣಿಯಾಗಿದ್ದ 'ಅವರು' ನಮ್ಮ ಕುಟುಂಬದ
ಸ್ನೇಹಿತರು; ಅ–
**ಮೋ**ಘ ಕಾರ್ಯಗಳಿಗೆ ಹೆಸರಾದ 'ಅವರು'
ಸ್ನೇಹಮಯಿಯಾಗಿ ಸದಾ
**ಹ**ಸನ್ಮುಖರಾಗಿ ತನ್ನ ಯಾವುದೇ ಕಷ್ಟಕರ–
ಒಳನೋವುಗಳನ್ನು
**ನ**ಗುನಗುತ್ತಾ ನುಂಗಿಕೊಂಡು
**ರಾ**ಷ್ಟ್ರದ ಉನ್ನತ ಪದವಿಯ ಪ್ರಧಾನಮಂತ್ರಿಗಳಿಗೆ
'ಯಾವುದು ಸರಿ–ಯಾ
**ವು**ದು ಸರಿಯಲ್ಲ' ಎಂದು ಶಾಂತರಾಗಿ ತಿಳಿಸುತ್ತಿದ್ದ
ಕೀರ್ತಿ

ಇನ್ನ ರಾಮಮೋಹನ ರಾವ್ ಅವರದು. ಅವರೂ ಅವರ ಧರ್ಮಪತ್ನಿ ರಾಜೇಶ್ವರಿಯವರು ನನ್ನ ಆತ್ಮೀಯ ಸ್ನೇಹಿತರು ಮತ್ತು ಸಂಬಂಧಿಕರೂ ಸಹ! ಅವರು ಪರಲೋಕಕ್ಕೆ ತೆರಳಿದ ದಿನ ನಾನು ವಾರಾಣಾಸಿಯಲ್ಲಿದ್ದೆ. ಆಗ ವಿಷಯ ತಿಳಿದು ನನಗೆ ಬಹಳ ವಿಷಾದವಾಯಿತು. ಕಾಶೀ ವಿಶ್ವನಾಥನಲ್ಲಿ ಅವರ ಆತ್ಮಕ್ಕೆ ಶಾಂತಿಕೋರಿ, ದೆಹಲಿ ಹಿಂತಿರುಗಿ ಬಂದು, ಅವರ ಪತ್ನಿ ರಾಜೇಶ್ವರಿಯನ್ನು ಮಾತನಾಡಿಸಿ ದುಃಖ ಹಂಚಿಕೊಂಡೆ.

ರಾಮಮೋಹನ ರಾವ್‌ರವರು, ಕುಟುಂಬ, ಕಲೆ, ಸಂಸ್ಕೃತಿ, ವಿಜ್ಞಾನ, ಕಾನೂನು ಪ್ರತೀ ಒಂದರಲ್ಲೂ ಪರಿಣಿತರು; ಉನ್ನತ ಅಭಿಪ್ರಾಯವುಳ್ಳವರಾಗಿದ್ದರು. ಅವರ ಸಹೋದರಿಯ ಸಂಗೀತ, ಮಗಳ ನೃತ್ಯ ನಮ್ಮ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನಡೆದಿತ್ತು.

ನಾನು ಮತ್ತು ನನ್ನ ದಿವಂಗತ ಪತಿ ಡಾ. ಚಿಂತಾಮಣಿ ಮೊಟ್ಟಮೊದಲಿಗೆ ದಿ. ಗೋಪಾಲಶಾಸ್ತ್ರಿಯವರ ಮನೆಯಲ್ಲಿ ರಾಮಮೋಹನ ರಾವ್‌ರವರನ್ನು ಭೇಟಿಯಾಗಿದ್ದೆವು. ಸುಜಾನ್‌ಸಿಂಗ್ ಪಾರ್ಕ್‌ನಲ್ಲಿದ್ದ ಶಾಸ್ತ್ರಿಯವರ ಮನೆಯಲ್ಲಿ ನಡೆದ ಹೊರನಾಡ ಕನ್ನಡಿಗರ ಸಭೆಯ ಸಂದರ್ಭವಾಗಿತ್ತು ಅದು. ಆದಿನ ಬಹಳ ಚಿಕ್ಕ ಆದರೆ ಚೊಕ್ಕವಾದ ಗುಂಪು ಸೇರಿತ್ತು. ಹೊಸ ಪರಿಚಯ ನಗುಮುಖದ ಸ್ವಾಗತದಿಂದ ರಾಮಮೋಹನ ರಾವ್ ನಮ್ಮನ್ನು ಮಾತನಾಡಿಸಿದರು. ನನಗೆ ಅವರ ಬಗ್ಗೆ ತಿಳಿದು ಬಹಳ ಸಂಕೋಚವೂ ಆಗಿತ್ತು.

ನಂತರ ಸುಮಾರು 1972ರಿಂದ ನಾನು ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ಡಾ. ಸರೋಜಿನಿ ಮಹಿಷಿಯವರ ಕಾಲದಿಂದಲು ಕೆಲಸ ಮಾಡಲು ಪ್ರಾರಂಭಿಸಿ, ಕಾರ್ಯಕಾರಿ ಸಮಿತಿಯ ಸದಸ್ಯೆ ತದನಂತರ ಉಪಾಧ್ಯಕ್ಷೆಯಾಗಿ ಅವರೊಡನೆ ಸಾಕಷ್ಟು ವರ್ಷ ಕೆಲಸ ಮಾಡಿದ್ದೇನೆ. ನಾನು ಎಂದೂ 'ನನಗೆ ಗೊತ್ತು' ಎನ್ನದೆ, ಅವರು ಕೊಡುತ್ತಿದ್ದ ಸಲಹೆಗಳಿಂದ ಹೇಗೆ ಕಾರ್ಯಗತವಾಗಬೇಕು ಹೇಗೆ ಮುಂದುವರಿಯಬೇಕು ಎಂದು ಅರಿತುಕೊಂಡು ಸಹಕಾರ, ಸಹಯೋಗದಿಂದ ಕೆಲಸ ಮಾಡುತ್ತಿದ್ದೆ. ಜನಸೇವೆ, ಸಂಘ ಸಂಸ್ಥೆಗಳ ಆದ್ಯತೆ ಏನು ಯಾವ ರೀತಿಯಲ್ಲಿ ನಡೆಸಬೇಕು ಎಂಬುದನ್ನು ರಾಮ ಮೋಹನರಾವ್‌ರವರ ಜೊತೆ ಕಲಿತುಕೊಂಡೆ.

ನಾನು ಮತ್ತು ಅವರು ನಾಲ್ಕು ವರುಷ ಒಟ್ಟಿಗೆ ಉಪಾಧ್ಯಕ್ಷರಾಗಿ ಆಗ ಸಂಘದ ನಿಯಮಾವಳಿಗಳಲ್ಲಿ ಇಲ್ಲದ, ಕಾವಲು ಸಮಿತಿಗೆ ಕೆಲಸ ಮಾಡಿದ್ದೆವು. ಆಗ ಒಂದು ದಿವಸ ಅವರು 'ನಾನು ಹೀಗೆ ಮಾಡುವೆ' ಎಂದಾಗ ಐ. ರಾಮ ಮೋಹನರಾವ್ ಎಂದರೆ ನೀವೇ ಎಂದು ಗೊತ್ತಾಯಿತು ಎಂದು ಸರಸವಾಗಿ ಮಾತಾಡಿದ್ದುಂಟು.

ಇತ್ತೀಚೆಗೆ ಅವರ ಆರೋಗ್ಯ ಸರಿ ಇರಲಿಲ್ಲ. ವಾರಕ್ಕೆ ಮೂರು ದಿವಸ ಆಸ್ಪತ್ರೆಗೆ ಹೋಗುತ್ತಾರೆಂದು ರಾಜೇಶ್ವರಿಯವರು ಹೇಳಿದ್ದರು. ಆದರೂ ಸಂಘದ ಕಾರ್ಯಕ್ರಮಕ್ಕೆ ಬಂದು ನಾನು ಎಲ್ಲಿ ಕೂತಿದ್ದರಲ್ಲಿಗೇ ಬಂದು ಮಾತನಾಡಿಸಿಕೊಂಡು ಹೋಗುತ್ತಿದ್ದರು.

ಅವರು ನನಗಿಂತ ವಯಸ್ಸಿನಲ್ಲಿ ಹಿರಿಯರು! ಜ್ಞಾನವೃದ್ಧರು. ಆದರೆ ಅವರ ಸ್ನೇಹ ಅತಿಶಯವಾಗಿತ್ತು. ಒಂದಾದ ಮೇಲೆ ಒಂದು ಪೆಟ್ಟು ಎನ್ನುವಂತೆ ಅವರ ಪ್ರೀತಿಯ 'ಮಗನ ಅಗಲಿಕೆ' ಅವರನ್ನು ಕಾಡಿತ್ತು. ಆ ದಿನವೂ ಕೂಡಾ ನನ್ನ ಹಿರಿಯ ಮಗ ಬಿ.ಸಿ. ಗುರುದತ್ತನನ್ನು ಜ್ಞಾಪಿಸಿಕೊಂಡು 'ನಾನು ನಿಮ್ಮ ಸುಖದುಃಖದಲ್ಲಿ ಸಮಭಾಗಿ' ಎಂದ ಅವರ ಮಾತು ಕಿವಿಯಲ್ಲಿ ಗುಂಯ್‌ಗುಡುತ್ತಿದೆ.

ನಾವು 45–50 ವರುಷಗಳ ಒಡನಾಟ ಸ್ನೇಹಗಳನ್ನುಳಿಸಿಕೊಂಡು ಹೊರನಾಡ ಕನ್ನಡಿಗರಾಗಿ ಬಾಳಿದ್ದೇವೆ. ಕೊನೆಯವರೆಗೂ ಅವರ ಹಸನ್ಮುಖ, ಚೈತನ್ಯ, ಕನ್ನಡಮ್ಮನಿಗಾಗಿ ಮುಡಿಪಿಟ್ಟ ಕೊಡುಗೆ ರಾಷ್ಟ್ರದ ಹಿತದೃಷ್ಟಿ ಇವೆಲ್ಲವೂ ಅವರು ಅತ್ಯುತ್ತಮ ಸ್ಥಾನದ ಅಧಿಕಾರಿಗಳು ಎನ್ನುವ ಮಾತನ್ನು ಮರೆಮಾಚಿಸಿತು.

ಅಂತಹ ವ್ಯಕ್ತಿಯ ಹೆಸರು ದೆಹಲಿ ಕರ್ನಾಟಕ ಸಂಘದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹುದು. ಸ್ನೇಹಿತರನ್ನು ಸಂಬಂಧಕ್ಕೆ ಜೋಡಿಸಲಾರೆ. ಆ ಸ್ನೇಹ ಎನ್ನುವ ಶಬ್ಧವನ್ನು ಯಾರು ಕಂಡು ಹಿಡಿದರೋ ಆಶ್ಚರ್ಯ!

ಆ ಸ್ನೇಹಿತ ಇನ್ನ ರಾಮಮೋಹನ ರಾವ್ ಇನ್ನಿಲ್ಲ ಎನ್ನುವುದಕ್ಕಿಂತ ಇಲ್ಲೆಲ್ಲೊ ಇದ್ದಾರೆ ಎನ್ನುವೆ ನಾನು! ಬಹಳ ಹಿಂದಿನಿಂದ ದೆಹಲಿ ಕರ್ನಾಟಕ ಸಂಘದ ಉತ್ತಮ ಪದಾಧಿಕಾರಿಗಳು ಸರೋಜಿನಿ ಮಹಿಷಿ, ಜಿ.ವೈ. ಕೃಷ್ಣನ್, ಗೋಪಾಲ ಶಾಸ್ತ್ರಿ, ಎ.ಪಿ. ಕುಮಟಾಕರ್, ಕೆ.ಆರ್. ನಾಗರಾಜ್ ಇನ್ನೂ ಎಲೆಮರೆಕಾಯಿಯಾಗಿ ಕೆಲಸ ಮಾಡಿದ ಕನ್ನಡಿಗರು ಅಗಲಿದ್ದಾರೆ. ಅವರೆಲ್ಲರೊಡನೆ ನಾನು ಕೆಲಸ ಮಾಡಿ ಅರಿತುಕೊಂಡಿದ್ದೇನೆ. ಅದು ನನ್ನ ಸೌಭಾಗ್ಯ! ಅವರುಗಳ ಮಾರ್ಗದರ್ಶನ ಅವರ ಅಮರತ್ವದ ಕುರುಹಾಗಿದೆ.

ಸಾವು ನಿಶ್ಚಿತ ಎನ್ನುವುದು ಸತ್ಯ ನುಡಿಯಾದರೂ ಅವರು ನಡೆದ ಹಾದಿಯಲ್ಲಿ ಯುವಕರುಗಳು ಮುನ್ನಡೆದು ಸಂಘ, ಸಂಸ್ಥೆಗಳನ್ನು ನಡೆಸಿಕೊಂಡು ಹೋಗುವುದೇ ನಾವು ಅವರ ಆತ್ಮಕ್ಕೆ ಅರ್ಪಿಸುವ ಶ್ರದ್ಧಾಂಜಲಿ. ಅವರ ಕುಟುಂಬದವರಿಗೆ ಮರೆಯಲಾರದ ದುಃಖವನ್ನು ಸಹಿಸಲು ಶಕ್ತಿ ಕೊಡಲೆಂದು ಪರಮಾತ್ಮನನ್ನು ಪ್ರಾರ್ಥಿಸುವೆನು. ಅ

***ಡಾ. ಅಹಲ್ಯಾ ಚಿಂತಾಮಣಿ***

# ಅಪರೂಪದ ವ್ಯಕ್ತಿ-ಇನ್ನ ರಾಮಮೋಹನ ರಾವ್

ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ "ಮೃದು ಸ್ವಭಾವ" ಶಬ್ಧಕ್ಕೆ ಅನುರೂಪ ಉದಾಹರಣೆಯಾಗಿ ದೆಹಲಿಯಲ್ಲಿ ಬದುಕಿದವರಾದ ಏಕೈಕ ವ್ಯಕ್ತಿ ಎಂದರೆ ಇನ್ನ ರಾಮಮೋಹನ ರಾವ್ ಎಂದು ಹೇಳಬಹುದು. ಅವರು ಯಾರೊಂದಿಗೂ ಕೋಪಿಸಿಕೊಂಡದ್ದನ್ನು ನಾನು ನೋಡಲೇ ಇಲ್ಲ. ಪ್ರಧಾನಮಂತ್ರಿಗಳ ನಿಕಟದಲ್ಲಿದ್ದು ಅದರಲ್ಲೂ ಮಾಧ್ಯಮ ಕ್ಷೇತ್ರದ ಅಗ್ರಸ್ಥಾನದಲ್ಲಿದ್ದೂ ಅನೇಕ ವೈಪರೀತ್ಯ ಪ್ರಸಂಗಗಳಲ್ಲಿಯೂ ಶಾಂತ ಸ್ವಭಾವ ಅದು ಹೇಗೆ ಕಾಪಾಡಿಕೊಂಡು ಬದುಕಿದರೆಂಬುದನ್ನು ನೆನಸಿಕೊಂಡರೆ ಈಗಲೂ ನನಗೆ ಅಚ್ಚರಿಯಾಗುತ್ತದೆ. ನಿಜಕ್ಕೂ ಅವರು ಓರ್ವ ಅಪರೂಪದ ವ್ಯಕ್ತಿ.

ಅವರ ಅಧ್ಯಕ್ಷತೆಯ ಅವಧಿಯಲ್ಲಿ ನನಗೆ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಮಂಡಳಿಯಲ್ಲಿ ಕೆಲಸ ಮಾಡುವ ಅವಕಾಶ ದೊರಕಿದ್ದು ನನ್ನ ಸೌಭಾಗ್ಯವೆಂದೇ ಭಾವಿಸಿದ್ದೇನೆ. ಅಂದಿನ ಮಾಸಿಕ ಕಾರ್ಯಕಾರಿ ಸಮಿತಿಯ ಸಭೆಗಳಲ್ಲಿಯೂ ಭಿನ್ನಾಭಿಪ್ರಾಯಗಳು, ಚರ್ಚೆಗಳು ಈಗಿನಂತೆಯೇ ನಡೆಯುತ್ತಿದ್ದವು. ಕೆ.ಆರ್. ನಾಗರಾಜ್, ಕೃಷ್ಣ ಭಟ್, ಜ್ಯೋತ್ಸ್ನಾ ರಾವ್ ಮತ್ತು ಸುಮಿತ್ರಾ ರಾವ್ ಇವರುಗಳ ವಾಗ್ಯುದ್ಧದಲ್ಲಿ ಇನ್ನೇನು ಸಭೆ ಅರ್ಧಕ್ಕೇ ಯಾವ ನಿರ್ಣಯಕ್ಕೂ ಬರದೇ ನಿಂತು ಬಿಡುತ್ತೇನೋ ಎಂಬ ಆತಂಕದಲ್ಲಿ ನಾವುಗಳು ಕುಳಿತಿರುವಾಗ, ಆವರೆಗೂ ಶಾಂತರೀತಿಯಲ್ಲಿ ಆಲಿಸುತ್ತಿದ್ದ ಅಧ್ಯಕ್ಷ ಸ್ಥಾನದಲ್ಲಿ ಕುಳಿತಿರುತ್ತಿದ್ದ ಇನ್ನ ರಾಮಮೋಹನ ರಾವ್‌ರ ಮುಂದಿರುತ್ತಿದ್ದ ಸಣ್ಣ ಗಂಟೆಯ ಶಬ್ಧ ಎಲ್ಲರ ಗಮನ ಅವರತ್ತ ಸೆಳೆಯುವಂತೆ ಮಾಡುತ್ತಿತ್ತು. ಆಗ ಅವರ ಮುಗ್ಧ ಮುಖದ ಮೇಲೆ ಮೂಡುತ್ತಿದ್ದ ಕೊಂಚ ಓರೆಯಾಗಿರುತ್ತಿದ್ದ ಮೃದು ನಗು ಮಾಂತ್ರಿಕನ ಮಾಯಾ ದಂಡದಂತೆ ಎಲ್ಲರನ್ನೂ ಮೌನವಾಗಿಸುತ್ತಿತ್ತು. ನಂತರ ಅವರು ನೀಡುತ್ತಿದ್ದ ನಿರ್ಣಯಗಳು ಯಾರಿಗೂ ನೋವನ್ನುಂಟು ಮಾಡದ ಸಕಾಲಿಕ ಹಾಗೂ ಸರಳವಾಗಿರುತ್ತಿದ್ದವು. ಹೀಗಾಗಿ ನನಗೆ ನೆನಪಿದ್ದಂತೆ ಅವರ ಅಧ್ಯಕ್ಷತೆಯಲ್ಲಿ ನಡೆದ ಬಹುತೇಕ ಎಲ್ಲ ಸಭೆಗಳು ಮಂದ ಹಾಸ್ಯದಲ್ಲಿಯೇ ಕೊನೆಗೊಳ್ಳುತ್ತಿದ್ದವು.

ಆಗಿನ ದಿನಗಳಲ್ಲಿ ಅಭಿಮತದ ಸಂಪಾದಕ ಮಂಡಳಿಯಲ್ಲದೇ, ಅಭಿಮತಕ್ಕಾಗಿ "ಅಭಿಮತ ಪತ್ರಿಕೆಯ ಸಲಹಾ ಮಂಡಳಿ" ಕೂಡ ಇತ್ತು. ಇದರ ಅಧ್ಯಕ್ಷತೆ ಇನ್ನ ರಾಮಮೋಹನ ರಾವ್ ಅವರದಾಗಿತ್ತು. ಈ ಮಂಡಳಿಯಲ್ಲಿ ದೆಹಲಿಯ ಪತ್ರಕರ್ತರುಗಳ ಜೊತೆಗೆ ಸುಭಾ ಸಿನ್ಹೂರ್ ದಾಸ್ ಮತ್ತು ನಾನು ಕೂಡ ಇದ್ದೆ. ಆಗ ಇನ್ನ ರಾಮಮೋಹನ ರಾವ್ ನೀಡಿದ ಸೂಚನೆಗಳು ಅತ್ಯಮೂಲ್ಯವಾದವುಗಳು. ಅವರು ಬಯಸಿದ್ದು ಕಾರ್ಯಕಾರಿ ಸಮಿತಿಯಿಂದ ಮುಕ್ತವಾದ ದೆಹಲಿ ಕರ್ನಾಟಕ ಸಂಘದ ಸರ್ವ ಸದಸ್ಯರ ಮುಖವಾಣಿ ಆಗಿರಬೇಕಾದ "ಅಭಿಮತ" ಪತ್ರಿಕೆ. ಆಗ ಅಭಿಮತ ಆ ಸ್ವಾಯತ್ತತೆ ಉಳಿಸಿಕೊಂಡಿತು ಎಂಬುದು ನನ್ನ ಅನಿಸಿಕೆ.

ಇನ್ನ ರಾಮಮೋಹನ ರಾವ್ ಅವರ ಕೊಡುಗೆ ದೇಶಕ್ಕೆ ಹಾಗೂ ವಿಶೇಷವಾಗಿ ದೆಹಲಿ ಕರ್ನಾಟಕ ಸಂಘಕ್ಕೆ ಅತ್ಯಮೂಲ್ಯವಾದುದಾಗಿದೆ, ದೇವರು ಅವರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ ಎಂದು ಕೃತಜ್ಞತಾಪೂರ್ವಕ ಶ್ರದ್ಧಾಸುಮನ ಸಲ್ಲಿಸುತ್ತೇನೆ. ಅ

***ಚೆನ್ನು ಎಸ್ ಮಠದ***




# ಮನಮೋಹಕ ವ್ಯಕ್ತಿತ್ವದ ಸಾಕಾರಮೂರ್ತಿ ಇನ್ನ ರಾಮಮೋಹನ ರಾಯರು

ಮೆಲುದನಿ ಹಾಗೂ ಸೌಮ್ಯ ಸ್ವಭಾವದಿಂದ ದೇಶ–ವಿದೇಶಗಳಲ್ಲಿ ಸಕಲ ಜನರ ಮನ ಮತ್ತು ಹೃದಯ ಗೆದ್ದ ಮನಮೋಹಕ ವ್ಯಕ್ತಿತ್ವದ ಸಾಕಾರಮೂರ್ತಿ ಇನ್ನ ರಾಮಮೋಹನ ರಾಯರು. ಹುಟ್ಟೂರು ಕಾರ್ಕಳದಿಂದ ಬಂದ ನನಗೆ ರಾಯರು ನಮ್ಮೂರಿನವರು ಎಂಬ ಹೆಮ್ಮೆ ಹಾಗೂ ಪ್ರೀತಿ. ಅವರನ್ನು ನನ್ನ ಹೃದಯ ಸಾಮೀಪ್ಯದ ಹಿರಿಯರಾಗಿ ಸ್ವೀಕರಿಸಿದ್ದೆ. ಈ ಪ್ರೀತಿಯ ಸಲುಗೆಯಿಂದ ಅವರು ಯಾವಾಗಲೂ ನನ್ನನ್ನು ಹಲೋ ದೇವಾನಂದ ಎಂದು ಕರೆಯುತ್ತಿದ್ದುದ್ದನ್ನು ನೆನೆಯುವಾಗ ನನ್ನ ಹೃದಯ ತುಂಬಿ ಬರುತ್ತದೆ. ಅವರ ಒಡನಾಟ ನಮ್ಮೆಲ್ಲರ ಸೌಭಾಗ್ಯ ಹಾಗೂ ಸ್ಪಟಿಕಮಣಿಯ ಸ್ಪರ್ಶ.

ಅವರನ್ನು ನೋಡಿ ಕೇಳಿ ನಾನು ಕಲಿತದ್ದು ಬಹಳಷ್ಟಿದೆ. ನನ್ನ ಬ್ಯಾಂಕ್‌ನಲ್ಲಿ ಸೌತ್ ಬ್ಲಾಕ್ ದೆಹಲಿ, ಡಿಎಚ್‌ಕ್ಯೂ ಶಾಖೆಯಲ್ಲಿ ಕೆಲಸ ಮಾಡುವಾಗ ಅವರೊಂದಿಗೆ ಸೇರಿ ನಾನು ಸಾರ್ವಜನಿಕ ಸಂಪರ್ಕದ ಹಲವಾರು ಮೂಲಸೂತ್ರಗಳನ್ನು ಕಲಿತೆ. ಅಜಾತಶತ್ರುವಾಗಿ ಸರಕಾರದ ಹಿರಿಯ ಹುದ್ದೆಗಳನ್ನು ನಿಭಾಯಿಸಿದ ರೀತಿ–ಆಡಳಿತ ಶಾಸ್ತ್ರದ ವಿದ್ಯಾರ್ಥಿಗೆ ಅಧ್ಯಯನ ಯೋಗ್ಯ. ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣದಲ್ಲಿ ಅಭಿಮತ ಸ್ಮರಣಸಂಚಿಕೆಯ ಸಂಪಾದಕನಾಗಿ ಧನ ಸಂಗ್ರಹಿಸಿದ ಸಮಯದಲ್ಲಿ ನನ್ನನ್ನು ಹುರಿದುಂಬಿಸಿ ಬೆನ್ನು ತಟ್ಟಿ ಕಾರ್ಯದ ಬದ್ಧತೆಯನ್ನು ಹೆಚ್ಚಿಸಿದವರು ರಾಯರು. ಡಾ. ಪುರುಷೋತ್ತಮ ಬಿಳಿಮಲೆಯವರ ನೇತೃತ್ವದ ನಮ್ಮ ತಂಡಕ್ಕೆ ಭೀಷ್ಮನ ಗೌರವಕ್ಕೆ ಪಾತ್ರರಾದವರು ರಾಯರು. ಅವರ ಸ್ಮರಣೆಯಲ್ಲಿ ಸಂಘದವರು ವಸಂತ ಶೆಟ್ಟಿ ಬೆಳ್ಳಾರೆಯವರ ಸಾರಥ್ಯದಲ್ಲಿ ಮಾಡಬಹುದಾದ ಯಾವುದೇ ಚಿರಸ್ಥಾಯಿ ಕಾರ್ಯದಲ್ಲಿ ಕೈಜೋಡಿಸಲು ನಾನು ಸದಾ ಸಿದ್ಧ ಹಾಗೂ ಅದು ನಮ್ಮೆಲ್ಲರ ಕರ್ತವ್ಯ. ದೆಹಲಿ ಕರ್ನಾಟಕ ಸಂಘ ಪ್ರತೀ ವರ್ಷ ಅವರ ಸುಂದರ ನೆನಪುಗಳನ್ನು ಮೆಲುಕು ಹಾಕಿ ಬಾಷ್ಪಾಂಜಲಿ ಅರ್ಪಿಸಲು ಒಂದು 'ರಾಮಮೋಹನ' ದಿನ ಆಚರಿಸಬೇಕು ಎಂದು ನನ್ನ ವಿನಂತಿ. ಮುಂದಿನ ಪೀಳಿಗೆಗೆ ಅವರು ನಿರಂತರ ಸ್ಫೂರ್ತಿಯಾಗಲಿ. ಅವರು ಈ ಭೂಮಿಯಲ್ಲಿ ಇರುವ ಸಮಯದಲ್ಲಿ ನಾನು ಇರುವ ಹಾಗೂ ಅವರೊಂದಿಗೆ ಒಡನಾಡಿಯಾಗಿ ಕೆಲಸ ಮಾಡುವ ಸೌಭಾಗ್ಯವನ್ನು ಕೊಟ್ಟ ದೆಹಲಿಗೆ ನಾನು ಚಿರಋಣಿ ಹಾಗೂ ಶ್ರೀದೇವರಿಗೆ ಅನಂತಾನಂತ ಸ್ಮರಣೆಗಳು. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿಯನ್ನು ಈಯಲಿ ಎಂದು ನನ್ನ ಹಾಗೂ ನನ್ನ ಶ್ರೀಮತಿ ನಮಿತಾ ಅವರ ಕಳಕಳಿಯ ಪ್ರಾರ್ಥನೆ. ಅ

***ದೇವಾನಂದ ಉಪಾಧ್ಯಾಯ***




# ಇನ್ನ ರಾಮಮೋಹನ ರಾವ್-ನಮ್ಮ ನಡುವಿಗಿದ್ದ ಒಂದು ಮೇರು ವ್ಯಕ್ತಿತ್ವ

ದಿವಂಗತ ಇನ್ನ ರಾಮಮೋಹನ ರಾವ್ ಅವರನ್ನು ನಾನು ಕಳೆದ ಸುಮಾರು 15–20 ವರ್ಷಗಳಿಂದ ಬಲ್ಲೆ. ಅವರು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಮುಂದೆ ಸಂಘದ ಸಾಂಸ್ಕೃತಿಕ ಸಮುಚ್ಚಯ ಸಮಿತಿಯ ಅಧ್ಯಕ್ಷರಾಗಿ ಸಂಘ ಹಾಗೂ ದೆಹಲಿ ಕನ್ನಡಿಗರಿಗೆ ಅವರು ಮಾಡಿರುವ ಸೇವೆ ಹಾಗೂ ನೀಡಿದ ಕೊಡುಗೆ ಅಪಾರ. ಸದಾ ನಗುಮೊಗದ, ಮೃದು ಭಾಷಿಯಾದ ಶ್ರೀ ರಾವ್ ಅವರು ಎಂದೂ ಜೋರಾಗಿ ಕೂಗಾಡಿದ್ದನ್ನಾಗಲಿ, ಸಿಟ್ಟಿಗೆದ್ದದ್ದನ್ನಾಗಲೀ ನಾನಂತು ನೋಡಿಯೇ ಇಲ್ಲ. ಅದಕ್ಕೆ ಬದಲಾಗಿ ಅವರು ಸದಾ ಸಿಟ್ಟಿಗೆದ್ದವರನ್ನು, ಜಗಳವಾಡಿ ಬೊಬ್ಬೆ ಹೊಡೆಯುತ್ತಿರುವವರನ್ನು ಸಮಾಧಾನಪಡಿಸುವುದನ್ನು ನಾನು ಬಹಳ ಸಾರಿ ನೋಡಿದ್ದೇನೆ. ರಾವ್ ಅವರು ಎಲ್ಲರನ್ನೂ ನಗುನಗುತ್ತಲೇ ಮಾತನಾಡಿಸುತ್ತಿದ್ದರು ಮತ್ತು ಗೌರವದಿಂದ ನಡೆಸಿಕೊಳ್ಳುತ್ತಿದ್ದರು. "ಏಕೆ? ಏನಾಯಿತು? ಅದಕ್ಕೇಕೆ ಕೋಪ, ಬೇಡಾ– ಬಿಟ್ಟುಬಿಡಿ, ನೋಡಿ ಸಮಾಧಾನದಿಂದ ಕೆಲಸ ಮಾಡಿದರೆ ಎಲ್ಲ ಸರಿ ಆಗುತ್ತೆ" ಇದು ರೋಷದಿಂದ ಕೂಗಾಡುವವರನ್ನು ಸಮಾಧಾನಪಡಿಸುತ್ತಿದ್ದ ರೀತಿ.

ದೆಹಲಿ ಕರ್ನಾಟಕ ಸಂಘದ ಅಥವಾ ಕನ್ನಡ ಶಿಕ್ಷಣ ಸಂಸ್ಥೆಯ ಸರ್ವಸದಸ್ಯರ ಸಭೆಗಳಲ್ಲಿ ಅವರ ಉಪಸ್ಥಿತಿ ಒಂದು ದೊಡ್ಡ ಗೌರವ ಮತ್ತು ಸಮಾಧಾನ. ಅವರು ತಪ್ಪದೇ ಈ ಎಲ್ಲ ಸಭೆ ಹಾಗೂ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಬಹು ಅಮೂಲ್ಯವಾದ ಸಲಹೆ ಸಹಕಾರವನ್ನು ನೀಡುತ್ತಿದ್ದರು. ತುಂಬಿದ ಕೊಡ ತುಳುಕುವುದಿಲ್ಲ ಎಂಬ ಗಾದೆ ಮಾತಿಗೆ ಒಪ್ಪುವಂತೆ ಅವರೆಂದೂ ಅವಸರದ ನಿರ್ಧಾರವನ್ನಾಗಲೀ, ಸಿಕ್ಕಾಪಟ್ಟೆ ಮಾತನಾಡುವುದನ್ನಾಗಲೀ ಮಾಡಿದವರಲ್ಲ. ರಾಷ್ಟ್ರದ ರಾಜಧಾನಿಯಲ್ಲಿ ನೆಲೆಸಿರುವ ಅತ್ಯಂತ ಗೌರವಾನ್ವಿತ ಕನ್ನಡ ವ್ಯಕ್ತಿತ್ವಗಳಲ್ಲಿ ಒಬ್ಬರಾದ ರಾವ್ ಒಬ್ಬರು ಎಂದೂ ತಮ್ಮ ಬಗ್ಗೆ ತಾವೇ ಹೇಳಿಕೊಂಡದ್ದನ್ನು ನಾನು ಕೇಳಿಲ್ಲ. ನಾಲ್ಕು ಜನ ಪ್ರಧಾನ ಮಂತ್ರಿಗಳಿಗೆ ಸಲಹಾಕಾರರಾಗಿ ದುಡಿದ ರಾವ್ ಅವರು ತಮ್ಮ ಅಂತಹ ಸಂದರ್ಭದ ಯಾವ ಛಾಯಾಚಿತ್ರಗಳನ್ನಾಲೀ, ಮಾತುಗಳನ್ನಾಗಲೀ

> *ಸದಾ ನಗುಮೊಗದ, ಮೃದು ಭಾಷಿಯಾದ ಶ್ರೀ ರಾವ್ ಅವರು ಎಂದೂ ಜೋರಾಗಿ ಕೂಗಾಡಿದ್ದನ್ನಾಗಲಿ, ಸಿಟ್ಟಿಗೆದ್ದದ್ದನ್ನಾಗಲೀ ನಾನಂತು ನೋಡಿಯೇ ಇಲ್ಲ. ಅದಕ್ಕೆ ಬದಲಾಗಿ ಅವರು ಸದಾ ಸಿಟ್ಟಿಗೆದ್ದವರನ್ನು, ಜಗಳವಾಡಿ ಬೊಬ್ಬೆ ಹೊಡೆಯುತ್ತಿರುವವರನ್ನು ಸಮಾಧಾನಪಡಿಸುವುದನ್ನು ನಾನು ಬಹಳ ಸಾರಿ ನೋಡಿದ್ದೇನೆ.*

ಎಲ್ಲಿಯೂ ಎಂದೂ ತನ್ನನ್ನು ಪ್ರಚಾರ ಮಾಡಿಕೊಳ್ಳುವ ದೃಷ್ಟಿಯಿಂದ ಸ್ವಪ್ರತಿಷ್ಠೆಯನ್ನು ತೋರಿದವರಲ್ಲ. ಅವರ ಒಂದು ಪುಸ್ತಕ ದೆಹಲಿಯ ಇಂಡಿಯಾ ಹ್ಯಾಬಿಟೆಟ್ ಸೆಂಟರ್‌ನಲ್ಲಿ ಬಿಡುಗಡೆಯಾದಾಗ ನೆರೆದಿದ್ದ ಸಭಿಕರಿಂದ ನಾನು ತಿಳಿದುಕೊಂಡೆ ಅವರ ವ್ಯಕ್ತಿತ್ವ ಎಷ್ಟು ದೊಡ್ಡದು ಎಂದು. ರಾಷ್ಟ್ರದ ಎಲ್ಲ ಪ್ರತಿಷ್ಠಿತ ವ್ಯಕ್ತಿಗಳು ಆ ಸಮಾರಂಭದಲ್ಲಿ ಭಾಗವಹಿಸಿದ್ದರು. ಪತ್ರಕರ್ತರು, ಲೇಖಕರು, ಚಿಂತಕರು, ರಾಜಕಾರಣಿಗಳು, ಪ್ರಾಧ್ಯಾಪಕರುಗಳು ಹಾಗೂ ಸೇನೆಯೂ ಸೇರಿದಂತೆ ಹಲವಾರು ಸರ್ಕಾರಿ ಕಾರ್ಯಾಲಯಗಳ ಹಿರಿಯ ಅಧಿಕಾರಿಗಳು ಹೀಗೆ ದೆಹಲಿಯ ಬಹುತೇಕ ಪ್ರತಿಷ್ಠಿತ ಅನ್ನಿಸಿಕೊಳ್ಳುವ ಗಣ್ಯರು ಅಂದು ಅಲ್ಲಿ ಹಾಜರಿದ್ದರು. ಈ ಪೈಕಿ ಹಲವರು ರಾವ್‌ರವರ ಜೊತೆ ಕೆಲಸ ಮಾಡಿದವರಾಗಿದ್ದು ಅವರುಗಳು ರಾವ್ ಅವರ ವ್ಯಕ್ತಿತ್ವದ ಕುರಿತು ಆಡಿದ ಮಹತ್ವ ಪೂರ್ಣವಾದ ಮಾತುಗಳು ಇಂದಿಗೂ ನನ್ನ ಕಿವಿಯಲ್ಲಿ ಗುಂಜಿಸುತ್ತಿವೆ.

ಕಳೆದ ಕೆಲವು ತಿಂಗಳುಗಳ ಹಿಂದೆ ಅವರು ತಮ್ಮ ಮಗನನ್ನು ಕಳೆದುಕೊಂಡಾಗ ದೆಹಲಿಯ ಚಿನ್ಮಯ ಮಿಷನ್‌ನಲ್ಲಿ ನಡೆದ ಶೋಕ ಸಭೆಯಲ್ಲಿ ನಾನು ಪಾಲ್ಗೊಂಡಿದ್ದೆ, ಆ ದಿನವೂ ರಾವ್ ಅವರ ಘನತೆವೆತ್ತ ವ್ಯಕ್ತಿತ್ವದ ಪರಿಚಯ ಇನ್ನೊಮ್ಮೆ ನನಗಾಯಿತು. ಶ್ರೀ ಎಲ್.ಕೆ. ಅಡ್ವಾಣಿ ಅವರೂ ಸೇರಿದಂತೆ ದೆಹಲಿಯ ನಾನಾ ಕ್ಷೇತ್ರದ ಹೆಸರಾಂತ ನೂರಾರು ಮಂದಿ ಗಣ್ಯರು ಬಂದು ರಾವ್ ದಂಪತಿಗಳಿಗೆ ಸಾಂತ್ವನ ಹೇಳಿದರು. ನಾನೂ ಕೂಡಾ ನನ್ನದೇ ಆದ ರೀತಿಯಲ್ಲಿ ರಾವ್ ಅವರಿಗೆ ಹೇಳಿದೆ, "ನಿಮ್ಮ ಮಗ ಸತ್ತಿಲ್ಲ ಅವರ ನಿಮ್ಮ ಜೊತೆಗೇ ಇದ್ದಾರೆ ಧೈರ್ಯ ಮಾಡಿಕೊಂಡು ಜೀವನವನ್ನು ಮುನ್ನಡೆಸಿ ಎಂದೆ" ಅವರ ನನ್ನ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡು ಅತ್ತು ಬಿಟ್ಟರು. ಆ ಕ್ಷಣವನ್ನು ನೆನೆದಾಗ ಈಗಲೂ ನನಗೆ ದುಃಖವಾಗುತ್ತದೆ.

ರಾವ್ ಅವರು ತೀರಿಕೊಂಡ ದಿನ ದುರ್ದೈವವಶಾತ್ ನಾನು ದೆಹಲಿಯಲ್ಲಿ ಇರಲಿಲ್ಲ. ಹಾಗಾಗಿ ಅವರ ಅಂತಿಮ ಯಾತ್ರೆಯಲ್ಲಿ ನನಗೆ ಪಾಲ್ಗೊಳ್ಳಲಾಗಲಿಲ್ಲ. ಅವರ ಮರಣದ ವಾರ್ತೆ ದೆಹಲಿ ಕರ್ನಾಟಕ ಸಂಘದ ವಾಟ್ಸ್ ಆಪ್ ಮೂಲಕ ನನಗೆ ತಲುಪಿದಾಗ ನಾನು ದೂರದ ಸಿಕ್ಕಿಂನಲ್ಲಿದ್ದೆ. ಮನಸ್ಸಿಗೆ ತುಂಬಾ ನೋವಾಯಿತು. ನನ್ನ ಮಡದಿಗೆ ವಿಷಯ ತಿಳಿಸಿದೆ. ಇಬ್ಬರೂ ಬಹಳ ಹೊತ್ತಿನವರೆಗೆ ಅವರ ಒಳ್ಳೆಯ ಕೆಲಸಗಳು ಮತ್ತು ವ್ಯಕ್ತಿತ್ವವನ್ನು ನೆನೆಸಿಕೊಂಡು ನಿಟ್ಟುಸಿರು ಬಿಟ್ಟೆವು. ಅವರ ಆತ್ಮಕ್ಕೆ ಭಗವಂತನಲ್ಲಿ ಶಾಂತಿ ಕೋರಿದೆವು. ರಾವ್ ಅವರು ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಹಾಗೂ ದೆಹಲಿ ಕನ್ನಡಿಗರಿಗಾಗಿ ಮಾಡಿದ ಅಪಾರ ಸೇವೆ ಸಾಧನೆಯನ್ನು ನೆನೆದೆವು. ಎರಡು ವರ್ಷಗಳ ಹಿಂದೆ ನಾನು ಸಂಪಾದಿಸಿದ "ಸೋಶಿಯಾಲಜಿ ಆಫ್ ಡಿಸ್‌ಪ್ಲೇಸ್‌ಮೆಂಟ್" ಎಂಬ ಪುಸ್ತಕದ ಪ್ರತಿಯೊಂದನ್ನು ರಾವ್ ಅವರಿಗೆ ನೀಡಿ ಆಶೀರ್ವದಿಸಿ ಎಂದು ಕೇಳಿಕೊಂಡಿದ್ದೆ. ಆಗ ಅವರು "ತುಂಬಾ ಸಂತೋಷ, ಈ ಪುಸ್ತಕವನ್ನು ನಾನು ರಿವ್ಯೂ ಮಾಡುತ್ತೇನೆ" ಎಂದು ಹೇಳಿ ತೆಗೆದುಕೊಂಡರು. ಅಂತೆಯೇ ಅದನ್ನು ರಿವ್ಯೂ ಮಾಡಿ ಮತ್ತೊಮ್ಮೆ ಭೇಟಿಯಾದಾಗ "ತುಂಬಾ ಒಳ್ಳೆಯ ಪ್ರಯತ್ನ ಮಾಡಿದ್ದೀರಿ, ಇನ್ನೂ ಇಂತಹ ಒಳ್ಳೆಯ ಪುಸ್ತಕಗಳನ್ನು ಬರೆಯುವ ಕೆಲಸ ಮಾಡಿ" ಎಂದು ಬೆನ್ನುತಟ್ಟಿ ಹುರಿದುಂಬಿಸಿದ್ದರು.

ಇಂತಹ ಮೇರು ವ್ಯಕ್ತಿತ್ವದ ಅಗಲಿಕೆಯಿಂದ ಉಂಟಾಗಿರುವ ನಷ್ಟವನ್ನು ನಾವು ಇನ್ನೆಂದೂ ತುಂಬಲಾರೆವು. ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಾಲೆಯ ಆಡಳಿತ ಮಂಡಳಿಗೆ ರಾವ್ ಅವರು ನೀಡಿರುವ ಸಲಹೆ ಮತ್ತು ಅನುಭವಗಳು ಅಪಾರ. ಸಂಘದ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣ ಕಾರ್ಯದಲ್ಲಿ ಮುಂಚೂಣಿಯಲ್ಲಿ ನಿಂತು ಕರ್ನಾಟಕ ಬ್ಯಾಂಕಿನ ಮೂಲಕ ಸಂಘಕ್ಕೆ ಅಗತ್ಯವಾದಷ್ಟು ಸಾಲವನ್ನು ಒದಗಿಸುವಲ್ಲಿ ರಾವ್ ಅವರು ವಹಿಸಿದ ಪಾತ್ರ ಅತ್ಯಂತ ದೊಡ್ಡದು. ಆಗ ಅವರು ಕರ್ನಾಟಕ ಬ್ಯಾಂಕಿನ ನಿರ್ದೇಶಕರೂ ಕೂಡಾ ಆಗಿದ್ದರು. ತಮ್ಮ ಸ್ವಂತ ಸಂಸ್ಥೆಯೊಂದನ್ನು ಕಟ್ಟುವಷ್ಟು ಕಳಕಳಿ ಹಾಗೂ ಮುತುವರ್ಜಿಯಿಂದ ಜವಾಬ್ದಾರಿ ಹೊತ್ತು ಕಾರ್ಯ ನಿರ್ವಹಿಸಿದ್ದರು.

ಕರ್ನಾಟಕದ ಕರಾವಳಿಯ ಪುಟ್ಟ ಹಳ್ಳಿಯೊಂದರಿಂದ ದೆಹಲಿಗೆ ಬಂದು ಸುಮಾರು ಆರು ದಶಕಗಳಿಗೂ ಹೆಚ್ಚು ಕಾಲ ನಿರಂತರವಾಗಿ ದೇಶ ಸೇವೆ ಮಾಡುವುದರ ಜೊತೆ ಜೊತೆಗೆ ಕನ್ನಡ ಭಾಷೆ, ಸಂಸ್ಕೃತಿ ಮತ್ತು ದೆಹಲಿ ಕನ್ನಡಿಗರ ಶ್ರೇಯಸ್ಸಿಗಾಗಿ ತಮ್ಮನ್ನು ಮುಡುಪಾಗಿಟ್ಟ ಈ ಧೀಮಂತ ವ್ಯಕ್ತಿತ್ವದ ಜೀವನ ಮತ್ತು ಆದರ್ಶ ದೆಹಲಿಯಲ್ಲಿರುವ ನಮ್ಮೆಲ್ಲರಿಗೂ ಮಾರ್ಗದರ್ಶಿಯಾಗಲಿ ಎಂದು ಆಶಿಸುತ್ತಾ ಅಗಲಿದ ಚೇತನಕ್ಕೆ ಇನ್ನೊಮ್ಮೆ ಹೃದಯ ಪೂರ್ವಕ ಶ್ರದ್ಧಾಂಜಲಿ ಅರ್ಪಿಸುತ್ತೇನೆ. ಅ

*ಸಖಾರಾಮ ಉಪ್ಪೂರು*

**ಎಂ.ಎಸ್. ಸಾಂತೂರ್, ಸುನಿಲ್ ರಾವ್ ಮತ್ತು ಓಂಪ್ರಕಾಶ್ ಆರ್. ಸ್ವಾಮಿ**

# ಅವರಿಗೆ ಸಂಘದಲ್ಲಿ ಶ್ರದ್ಧಾಂಜಲಿ

ದೆಹಲಿ ಕರ್ನಾಟಕ ಸಂಘವು ಇತ್ತೀಚೆಗೆ ನಿಧನರಾದ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯರಾಗಿದ್ದ ಶ್ರೀ ಎಂ.ಎಸ್. ಸಾಂತೂರ್ ಮತ್ತು ಆಜೀವ ಸದಸ್ಯರಾದ ಶ್ರೀ ಪಿ. ಸುನಿಲ್ ರಾವ್ ಮತ್ತು ಶ್ರೀ ಓಂಪ್ರಕಾಶ್ ಆರ್. ಸ್ವಾಮಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲು ಒಂದು ಸಭೆಯನ್ನು ಇದೇ ಮೇ 14ರಂದು ಆಯೋಜಿಸಿತ್ತು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತಾಡುತ್ತಾ ಶ್ರೀ ಓಂಪ್ರಕಾಶ್ ಸ್ವಾಮಿಯವರು 1980–90 ರ ಕಾಲದಲ್ಲಿ ಸಂಘದಲ್ಲಿ ಸಕ್ರಿಯರಾಗಿದ್ದರು. ಅವರು ಜೆಎನ್‌ಯು ವಿನಲ್ಲಿ ಸೇವೆ ಸಲ್ಲಿಸುತ್ತಿದ್ದರು ಎಂದರು. "ನಾನು ಮತ್ತು ಓಂಪ್ರಕಾಶ್ ಅವರು ಸಂಘದ ಚುನಾವಣೆಗೆ ಒಟ್ಟಿಗೆ ಸ್ಪರ್ಧಿಸಿದ್ದೆವು," ಎಂದ ಶ್ರೀ ಬೆಳ್ಳಾರೆ ಅವರು ಸ್ವಾಮಿಯವರು ತುಂಬಾ ಸಕ್ರಿಯವಾಗಿ ಎಲ್ಲಿ ವ್ಯವಸ್ಥೆ ಸರಿ ಇಲ್ಲ, ಅಲ್ಲಿ ಧ್ವನಿ ಎತ್ತುತ್ತಿದ್ದರು ಎಂದರು. ದೆಹಲಿ ಕರ್ನಾಟಕ ಸಂಘದಲ್ಲಿ 1980ರ ಸಮಯದಲ್ಲಿ ಹಿರಿಯ ತಲೆಮಾರಿನ ಶ್ರೀ ಎಂ.ಎಸ್. ಸಾಂತೂರು ಅವರು ಅತ್ಯಂತ ಪ್ರೀತಿಯಿಂದ ಸಂಘದ ಗ್ರಂಥಾಲಯವನ್ನು ವ್ಯವಸ್ಥಿತವಾಗಿ ಇಡುತ್ತಿದ್ದರು. ಬಿಲ್ಲವ ಸಮಾಜದ ಎಲ್ಲರಿಗೂ ಅವರು ಅತ್ಯಂತ ಹಿರಿಯರು. ನಿವೃತ್ತಿಯ ಬಳಿಕ ಸಂಘಕ್ಕೆ ಬೆಳಿಗ್ಗೆ ಬಂದು ಸಾಯಂಕಾಲದವರೆಗೆ ಗ್ರಂಥಾಲಯಕ್ಕಾಗಿ ತಮ್ಮ ಸಮಯವನ್ನು ಕೊಟ್ಟವರು ಸಾಂತೂರು ಅವರು ಎಂದು ಶ್ರೀ ಬೆಳ್ಳಾರೆ ಅವರು ವಿವರಿಸಿದರು. ಶ್ರೀ ಪಿ. ಸುನಿಲ್ ರಾವ್ ಅವರು ಸಂಘದ ಕಾರ್ಯಕ್ರಮಗಳಿಗೆ ಬರುತ್ತಿದ್ದರು. ಅವರು ಸಂಘ ಆಯೋಜಿಸುವ ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ತುಳು ಕಾರ್ಯಕ್ರಮಗಳಲ್ಲೂ ಭಾಗವಹಿಸುತ್ತಿದ್ದರು ಎಂದು ಶ್ರೀ ಬೆಳ್ಳಾರೆ ಅವರು ನೆನಪಿಸಿಕೊಂಡರು.

ಸಂಘದ ಮಾಜಿ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತಾಡುತ್ತ ನಾನು 1998ರಲ್ಲಿ ದೆಹಲಿಗೆ ಬಂದಾಗ ಅನೇಕ ಹಿರಿಯರನ್ನು ಮಾತಾನಾಡಿಸುವ ಅವಕಾಶ ದೊರೆಯಿತು. ಅದರಲ್ಲಿ ಹಿರಿಯ ತಲೆಮಾರಿನ ಎಂಎಸ್. ಸಾಂತೂರು, ಗೋಪಾಲಶಾಸ್ತ್ರಿ, ಐ. ರಾಮಮೋಹನ ರಾವ್, ಶ್ರೀ ಎಸ್.ಎಸ್. ಜವಳಿ, ಶ್ರೀ ಎಚ್.ಎಸ್. ಕುಲಕರ್ಣಿ ಅವರನ್ನು ಬೇರೆ ಬೇರೆ ಕಾರಣಗಳಿಗಾಗಿ ಅವರೊಡನೆ ಕೆಲಸ ಮಾಡುವ ಅವಕಾಶ ಸಿಕ್ಕಿತು ಎಂದರು. "ಸಂಘದ ನೂತನ ಕಟ್ಟಡದ ಆರಂಭಿಕ ಹಂತದಲ್ಲಿ ಅದರ ಪ್ಲಾನ್ ಇತ್ಯಾದಿಗಳಿಗಾಗಿ ಕೆ.ಆರ್. ನಾಗರಾಜ ಅವರೊಂದಿಗೆ ಕೆಲಸ ಮಾಡುತ್ತಿದ್ದೆ. ಇವರೆಲ್ಲಾ ಸಂಘ ಹೇಗೆ ಬೆಳೆಯಬೇಕು, ಹೇಗೆ ನಡೆಯಬೇಕು ಎಂದು ಮಾರ್ಗದರ್ಶನ ನೀಡುತ್ತಿದ್ದರು. ನಾನು ಸಾಹಿತ್ಯ ವಿದ್ಯಾರ್ಥಿಯಾದ್ದರಿಂದ ಸಾಹಿತ್ಯ, ಸಂಸ್ಕೃತಿಯ ಬಗ್ಗೆ ತಿಳಿದಿರುವ ಹಿರಿಯರ ಜೊತೆ ಹೆಚ್ಚು ಆಸಕ್ತಿ ವಹಿಸುತ್ತಿದ್ದೆ. ಹಾಗೆ ಐ. ರಾಮಮೋಹನ ರಾವ್ ಅವರು ರಾಜಕೀಯ ಮತ್ತು ಸಾಂತೂರು ಅವರು ಸಂಘದ ಗ್ರಂಥಾಲಯ ಬೆಳೆಸಿದವರು" ಎಂದರು. ಸಾಂತೂರು ಅವರು ಹೋದ ಮೇಲೆ ಗ್ರಂಥಾಲಯವನ್ನು ಆ ಮಟ್ಟಕ್ಕೆ ಬೆಳೆಸಲು ಆಗಲಿಲ್ಲ. ಅದಕ್ಕೆ ಬೇರೆ ಬೇರೆ ಕಾರಣಗಳಿವೆ. ಈಗ ಪುಸ್ತಕಗಳನ್ನು ದೊಡ್ಡಮಟ್ಟದಲ್ಲಿ ಓದುವವರಿಲ್ಲ, ಮೊದಲು ಓದುವವರಿದ್ದರು. ಈಗ ಪುಸ್ತಕಗಳು ಮನೆಯಲ್ಲೇ ಸಿಗುತ್ತವೆ. ಇಲ್ಲಿ ಬಂದು ಓದಲು ಅನೇಕ ಸಮಸ್ಯೆಗಳಿವೆ; ಆದ್ದರಿಂದ ಲೈಬ್ರೇರಿ ಮೇಲೆ ಬರಲಿಲ್ಲ. ಸಾಂತೂರು ಅವರು ಬಹಳ ಅದ್ಭುತವಾಗಿ ಮಾಡಿದರು. ನಾನು ಅವರನ್ನು ಭೇಟಿ ಮಾಡಿದ ಪ್ರತಿ ಬಾರಿಯೂ ಲೈಬ್ರೇರಿಯನ್ನು ಚೆನ್ನಾಗಿ ಮಾಡಬೇಕು ಎಂದು ನೆನಪಿಸುತ್ತಿದ್ದರು ಎಂದು ಡಾ. ಬಿಳಿಮಲೆಯವರು ನುಡಿದರು. ಐ. ರಾಮಮೋಹನ ರಾಯರು ನನ್ನ ಜೀವನಕ್ಕೆ ಒಂದು ಆದರ್ಶ. ಅವರು ನನ್ನ ದೆಹಲಿಯ ಜೀವನದಲ್ಲಿ ಯಾಕೆ ನೆನಪು ಉಳಿಯುತ್ತಾರೆ ಅಂದರೆ ಸಾಂಸ್ಕೃತಿಕ ಸಮುಚ್ಚಯಕ್ಕೆ ಹೇಗೆ ಬದ್ಧರಾಗಿರಬೇಕು ಎಂಬುದನ್ನು ಕಲಿಸಿಕೊಟ್ಟವರು, ವ್ಯಕ್ತಿಗಳಿಗೆ ಅಲ್ಲ, ಎಷ್ಟೋ ಬಾರಿ ಸಂಸ್ಥೆ ಮತ್ತು ವ್ಯಕ್ತಿಗಳನ್ನು ಮಿಶ್ರಣ ಮಾಡಿಕೊಂಡು ಸಂಘ ವ್ಯಕ್ತಿಗಳಿಗಿಂತ ದೊಡ್ಡದು ಎಂದು ಅವರು ನನಗೆ ಕಲಿಸಿಕೊಟ್ಟರು. ಸುನಿಲ್ ಪಿ. ರಾವ್ ಅವರನ್ನು ನಾನು ಭೇಟಿ ಮಾಡಿದ್ದೇನೆ. ಓಂಪ್ರಕಾಶ್ ಆರ್. ಸ್ವಾಮಿ ಅವರು ಜೆಎನ್‌ಯು ವಿನಲ್ಲಿ ಕೆಲಸ ಮಾಡುತ್ತಿದ್ದರು ಎಂದು ಶರಾವತಿ ಕನ್ನಡ ಸಂಘದ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಾಗ ತಿಳಿದುಕೊಂಡಿರುತ್ತೇನೆ ಎಂದು ಡಾ. ಬಿಳಿಮಲೆಯವರು ಹೇಳಿದರು.

ಶ್ರೀ ಅಮೃತೇಶ್ ರಾವ್ ಅವರು ಪಿ. ಸುನಿಲ್ ರಾವ್ ಅವರು ಮಾತನಾಡಿ ನನ್ನ ಒಡನಾಡಿ, ತುಂಬಾ ಎಳೆಯ ವಯಸ್ಸಿನಲ್ಲಿ ನಮ್ಮನ್ನು ಬಿಟ್ಟು ಅಗಲಿದ್ದಾರೆ. ಕಳೆದ 35 ವರ್ಷಗಳಲ್ಲಿ ದೆಹಲಿಯಲ್ಲಿದ್ದು, ಪಿಎಸ್‌ಆರ್ ಕಂಪ್ಯೂಟರ್ಸ್‌ನಲ್ಲಿ ಸಾಫ್ಟ್‌ವೇರ್ ಖುದ್ದಾಗಿ ತಯಾರು ಮಾಡಿ ಎಲ್ಲಾ ಸ್ಕೂಲ್‌ಗಳಿಗೆ ನೀಡುತಿದ್ದರು. ಇವರ ಕಂಪನಿಯಲ್ಲಿ 15–20 ಜನ ಕೆಲಸ ಮಾಡುತ್ತಾ ಇದ್ದರು. ಅವರು ಬಡಮಕ್ಕಳಿಗೆ ತುಂಬಾ ಸಹಾಯ ಮಾಡುತ್ತಾ ಇದ್ದರು ಎಂದರು.

ಶ್ರೀ ವಿ.ವಿ. ಬಿರಾದಾರ ಅವರು ಮಾತನಾಡುತ್ತ ಸಾಂತೂರು ಅವರ ನಿಧನ ಬಹಳ ಆಘಾತವನ್ನುಂಟು ಮಾಡಿದೆ. ಜೆ.ಎನ್.ಯು.ವಿನಲ್ಲಿ ಕೆಲಸ ಮಾಡುತ್ತಿದ್ದ ಓಂಪ್ರಕಾಶ್ ಆರ್. ಸ್ವಾಮಿ ಅವರು ಸಮಾಜಕಕ್ಕಾಗಿ ಎಲೆಮರೆಕಾಯಿಯಾಗಿ ಸೇವೆ ಮಾಡಿದ್ದರು. ಇವರಿಗೆ ಡಾಕ್ಟರೇಟ್ ಪದವಿ ಬಂದಾಗಲೂ ಯಾವುದೇ ವಿಷಯವನ್ನು ಅವರು ಬಹಿರಂಗಪಡಿಸಿರಲಿಲ್ಲ, ತುಂಬಾ ನಿಷ್ಟಾವಂತ ವ್ಯಕ್ತಿಯಾಗಿದ್ದರು ಎಂದು ತನ್ನ ದುಃಖವನ್ನು ವ್ಯಕ್ತಪಡಿಸಿದರು.

ಡಾ. ವೈ. ಅವನೀಂದ್ರನಾಥ್ ಅವರು ಮಾತನಾಡುತ್ತ ಕೆಲವು ದಿನಗಳ ಅವಧಿಯಲ್ಲಿ ಕೆಲವು ಹಿರಿಯನ್ನು ನಾವು ಕಳೆದುಕೊಂಡಿರುವುದು ಬಹಳ ವಿಷಾದಕರ ಸಂಗತಿ. ಡಾ. ಪುರುಷೋತ್ತಮ ಬಿಳಿಮಲೆ ಅವರು ಸಂಘದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ನಾವು ಸಾಂತೂರು ಅವರ ಮನೆಗೆ ಹೋಗಿದ್ದೆವು. ಇದು ಬಹಳ ಆತ್ಮೀಯವಾದ ಭೇಟಿ ಆಗಿತ್ತು. ಸುನಿಲ್ ರಾವ್ ಅವರನ್ನು ನಾನು ಗ್ರಂಥಾಲಯವನ್ನು ಆಧುನೀಕರಣಗೊಳಿಸಬೇಕೆಂದು ನಾನು ಸಂಘದ ಕೋಶಾಧಿಕಾರಿಯಾಗಿದ್ದಾಗ ಗ್ರಂಥಾಲಯದ ಸಾಫ್ಟ್‌ವೇರ್‌ಗಾಗಿ ಅವರನ್ನು ಸಂಘದಲ್ಲಿ ಭೇಟಿಯಾಗಿದ್ದೆ ಎಂದು ನುಡಿದರು.

ಶ್ರೀ ಚೆನ್ನು ಎಸ್. ಮಠದ ಅವರು ಮಾತನಾಡುತ್ತ ಸಾಂತೂರು ಅವರು ತುಂಬಾ ಮೃದು ಸ್ವಭಾವಿ, ಎತ್ತಿದ ದನಿಯಲ್ಲಿ ಯಾವಾಗಲೂ ಮಾತನಾಡಿದವರಲ್ಲ, ಅವರ ಜೊತೆ ನಾನು ಕಾರ್ಯಕಾರಿ ಸಮಿತಿಯಲ್ಲೂ ಕೆಲಸ ಮಾಡಿದ್ದೇನೆ. ಮಾತು ಬಹಳ ಕಡಿಮೆ. ಕೆಲಸದ ಬಗ್ಗೆ ನಾವು ಅವರಿಂದ ಕಲಿಯಬೇಕು ಎಂದರು. ಓಂಪ್ರಕಾಶ್ ಆರ್. ಸ್ವಾಮಿ ಅವರು ಸುಮಾರು 1984ರಿಂದ ನನಗೆ ಪರಿಚಯ ತುಂಬಾ ಒಳ್ಳೆಯ ವ್ಯಕ್ತಿ. ಅವರು ನಮ್ಮ ಸಮಾಜಕ್ಕಾಗಿ ಬಹಳ ಕೆಲಸ ಮಾಡಿದ್ದಾರೆ. ನಮ್ಮ ಜನ ಮುಂದೆ ಬರಬೇಕು ಎಂಬ ಕಳಕಳಿ ಅವರಲ್ಲಿತ್ತು ಎಂದರು. ಸಂಘದ ಖಜಾಂಚಿ ಶ್ರೀ ಕೆ.ಎಸ್.ಜಿ. ಶೆಟ್ಟಿ ಹಾಗೂ ಸುನಿಲ್ ಅವರ ಸಂಬಂಧಿ ಶ್ರೀ ರಾಮಕೃಷ್ಣ ಅವರು ಕೂಡಾ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಅ

***ಅಭಿಮತ ವರದಿ***



# ಪುರುಷೋತ್ತಮ ಬಿಳಿಮಲೆ ಅವರಿಗೆ ಪುರಸ್ಕಾರ




> ಪ್ರೀತಿಯ ಕೊಡು ಕೊಳ್ಳುವಿಕೆಯಲ್ಲಿ ಬಿಳಿಮಲೆ ಅವರು ಶ್ರೇಷ್ಠತೆಯನ್ನು ಮೆರೆದಿದ್ದಾರೆ. ಅತೀ ಹೆಚ್ಚು ಲೇಖನಗಳನ್ನು ಬರೆದು ಕನ್ನಡದ ರಾಯಬಾರಿ ಎಂದು ಎನಿಸಿಕೊಂಡಿದ್ದಾರೆ

ದೆಹಲಿ ಕರ್ನಾಟಕ ಸಂಘದ ಮಾಜೀ ಅಧ್ಯಕ್ಷ, ಜಾನಪದ ವಿದ್ವಾಂಸ, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಪೀಠದ ಮುಖ್ಯಸ್ಥರಾದ ಡಾ. ಪುರುಷೋತ್ತಮ ಬಿಳಿಮಲೆ ಅವರನ್ನು ಉಡುಪಿ ಯಕ್ಷಗಾನ ಕಲಾರಂಗದ ಆಶ್ರಯದಲ್ಲಿ ಉಡುಪಿಯ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ಇದೇ ಮೇ 28ರಂದು ನಡೆದ ಸಮಾರಂಭದಲ್ಲಿ ಅಭಿನಂದಿಸಲಾಯಿತು. ಸಮಾರಂಭವನ್ನು ಉದ್ಘಾಟನೆ ಮಾಡಿದ ಯಕ್ಷಗಾನ ಚಿಂತಕ ಎಂ. ಪ್ರಭಾಕರ ಜೋಶಿ 'ಪ್ರೀತಿಯ ಕೊಡುಕೊಳ್ಳುವಿಕೆಯಲ್ಲಿ ಬಿಳಿಮಲೆ ಅವರು ಶ್ರೇಷ್ಠತೆಯನ್ನು ಮೆರೆದಿದ್ದಾರೆ. ಅತೀ ಹೆಚ್ಚು ಲೇಖನಗಳನ್ನು ಬರೆದು ಕನ್ನಡದ ರಾಯಬಾರಿ ಎಂದು ಎನಿಸಿಕೊಂಡಿದ್ದಾರೆ' ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜಾನಪದ ವಿದ್ವಾಂಸ ಕೃಷ್ಣಮೂರ್ತಿ ಹನೂರು, ಪುರುಷೋತ್ತಮ ಬಿಳಿಮಲೆ ಅವರು ಅಕ್ಷರಸ್ಥರು ಮತ್ತು ಜನಪದರ ನಡುವೆ ಓಡಾಡುವ ಸರಳ ವ್ಯಕ್ತಿ. ಜಾನಪದವನ್ನು ಕೆಲವರು ಸೃಜನಶೀಲತೆಗಾಗಿ ಬಳಸಿಕೊಂಡರೆ, ಇನ್ನು ಕೆಲವರು ಸಂಗ್ರಹಕ್ಕಾಗಿ ಉಪಯೋಗಿಸುತ್ತಾರೆ. ಆದರೆ, ಬಿಳಿಮಲೆ ಜಾನಪದವನ್ನು ನೋಡುತ್ತಾ ನೋಡುತ್ತಾ ಅದರೊಳಗಿರುವ ಅರ್ಥವನ್ನು ಬಿಡಿಸುವುದರ ಜೊತೆಗೆ ಅಲ್ಲಿರುವ ಸಮಸ್ಯೆಯನ್ನು ಜನರ ಮುಂದೆ ಇಡುತ್ತಾರೆ ಎಂದು ಹೇಳಿದರು. ಯಕ್ಷಗಾನ ಗುರು ಬನ್ನಂಜೆ ಸಂಜೀವ ಸುವರ್ಣ, ಯಕ್ಷಗಾನ ಬಯಲಾಟ ಅಕಾಡೆಮಿಯ ಸದಸ್ಯ ಕಿಶನ್ ಹೆಗ್ಡೆ, ಯಕ್ಷಗಾನ ಕಲಾರಂಗದ ಅಧ್ಯಕ್ಷ ಕೆ. ಗಣೇಶ್ ರಾವ್ ಮೊದಲಾದವರು ಉಪಸ್ಥಿತರಿದ್ದರು. ಅ

***ಅಭಿಮತ ವರದಿ***




# ಅನನ್ಯ ಮತ್ತು ಪವಿತ್ರಾ ಅವರ ಗುರುವಂದನಾ ಕಾರ್ಯಕ್ರಮ

ದೆಹಲಿ ಕರ್ನಾಟಕ ಸಂಘದ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರ ಪುತ್ರಿ ಕುಮಾರಿ ಅನನ್ಯ ಹಾಗೂ ರಾಜೇಶ್ ಎಚ್.ಡಿ. ಅವರ ಪುತ್ರಿ ಕುಮಾರಿ ಪವಿತ್ರಾ ರಾಜೇಶ್ ಅವರ ಗುರುವಂದನಾ ಕಾರ್ಯಕ್ರಮವು ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಆದಿಚುಂಚನಗಿರಿ ಮಠ, ಶ್ರೀ ನಂಜಾವಧೂತ ಸ್ವಾಮಿಗಳು, ಶ್ರೀ ಅನ್ನದಾನೇಶ್ವರ ನಂದನಾಥ ಸ್ವಾಮೀಜಿಗಳು, ರಾಮನಗರ, ಶ್ರೀ ಸೌಮ್ಯಾನಂದನಾಥ ಸ್ವಾಮೀಜಿಗಳು, ವಿಜಯನಗರ ಬೆಂಗಳೂರು, ಶ್ರೀ ವಿದ್ಯಾಸಾಗರನಂದನಾಥ ಸ್ವಾಮಿಗಳು, ಕನಕಪುರ ಇವರುಗಳ ಸಾನ್ನಿಧ್ಯದಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಮೇ 21ರಂದು ನಡೆಯಿತು.

ಈ ಸಂದರ್ಭದಲ್ಲಿ ಶ್ರೀ ಕೆ.ಸಿ. ರಾಮಮೂರ್ತಿ ರಾಜ್ಯ ಸಭಾ ಸದಸ್ಯರು, ಎಚ್.ಎಂ. ರೇವಣ್ಣ ವಿಧಾನ ಪರಿಷತ್ ಸದಸ್ಯರು, ನಾಡೋಜ ಡಾ. ಹಂ.ಪಾ. ನಾಗರಾಜಯ್ಯ, ನಾಡೋಜ ಡಾ. ಮಹೇಶ್ ಜೋಷಿ, ನಾದಬ್ರಹ್ಮ ಡಾ. ಹಂಸಲೇಖ, ಶ್ರೀ ಟಿ.ಎಸ್. ನಾಗಾಭರಣ, ಶ್ರೀ ಕೆ.ಎ. ದಯಾನಂದ, ಸಿ.ಇ.ಓ., ಬೆಂಗಳೂರು ಗ್ರಾಮಾಂತರ ಹಾಗೂ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು ದೆಹಲಿ ಕರ್ನಾಟಕ ಸಂಘ, ಇವರುಗಳು ಉಪಸ್ಥಿತರಿದ್ದರು. ಅ

***ಅಭಿಮತ ವರದಿ***




**'ಅಭಿಮತ' ಮುಖಪುಟ ಒಂದು ವಿಸ್ಮಯ**

ಏಪ್ರಿಲ್ 2017ರ 'ಅಭಿಮತ' ಸಂಚಿಕೆಯು ಅಂಚೆ ಮೂಲಕ ಬಂದ ತಕ್ಷಣ ಅಚ್ಚರಿಪಟ್ಟೆ. ಮುಖಪುಟದಲ್ಲಿದ್ದ ಎಳೆ ವಯಸ್ಸಿನ ಮೂವರು ಪ್ರಬುದ್ಧ ಬಾಲಕಿಯರ ವೇಷಭೂಷಣ ಮತ್ತು ಭರತನಾಟ್ಯದ ನೃತ್ಯ ಭಂಗಿಯ ಚಿತ್ರವು ಬಹಳಷ್ಟು ಆಕರ್ಷಿಸಿತು. ಚಿತ್ರದಲ್ಲಿನ ಸಮಸ್ತವೂ ಭಾರತೀಯ ಸಂಸ್ಕೃತಿಯನ್ನು ಒಳಗೊಂಡಿದ್ದು ಬಹಳ ಸಂತೋಷವನ್ನು ನೀಡಿತು. ಆ ಚಿತ್ರದ ಕೆಳಗೆ 'ಕಜಕಿಸ್ತಾನದ ಕಲಾವಿದೆಯರಿಂದ ನೃತ್ಯ' ಎಂಬ ಶೀರ್ಷಿಕೆಯನ್ನು ನೋಡುತ್ತಿದ್ದಂತೆ ಅಚ್ಚರಪಟ್ಟೆ. ಕಜಕಿಸ್ತಾನವು ಭಾರತದಿಂದ ಬೇರೆಯಾದ ರಾಷ್ಟ್ರವಿರಬಹುದು ಎಂದು ಊಹಿಸಿ ವಿಶ್ವಭೂಪಟ ತೆಗೆದು ನೋಡಿದೆ. ಭಾರತದ ಉತ್ತರದ ವಾಯುವ್ಯ ದಿಕ್ಕಿನಲ್ಲಿ ಪಾಕಿಸ್ತಾನ, ಅದರ ಉತ್ತರದಲ್ಲಿ ಅಫಘಾನಿಸ್ತಾನ, ಕಿರ್ಗಿಸ್ತಾನ, ಉಜ್ಬೇಕಿಸ್ತಾನ ರಾಷ್ಟ್ರಗಳ ಉತ್ತರಕ್ಕೆ ರಷ್ಯಾದ ದಕ್ಷಿಣಕ್ಕೆ ಕಜಕಿಸ್ತಾನ್ ದೇಶವಿದೆ. ಅದೊಂದು ಸ್ವತಂತ್ರ ರಾಷ್ಟ್ರವಾಗಿದ್ದು, ಒಂದೂವರೆ ಕೋಟಿ ಜನಸಂಖ್ಯೆಯನ್ನು ಹೊಂದಿದೆ. ಅವರಲ್ಲಿ ಮುಸ್ಲಿಮರು ಸಾಕಷ್ಟು ಸಂಖ್ಯೆಯಲ್ಲಿದ್ದರೂ ಅವರು ಸಹನಶೀಲರಾಗಿದ್ದಾರೆ. ಅಲ್ಲಿಯ ಕಲಾವಿದರು, ಕಲಾವಿದೆಯರು ಭಾರತೀಯ ಸಂಸ್ಕೃತಿಯನ್ನು ಮೆಚ್ಚಿಕೊಂಡವರು. ಭಾರತೀಯರ ಸಂಗೀತ, ನರ್ತನಗಳನ್ನು ಕಲಿತು ಜನರನ್ನು ಮನರಂಜನೆಗೊಳಿಸುತ್ತಾರೆ. ಅದರ ಸಾಕ್ಷಿ ಎಂಬಂತೆ ಇದ್ದ 'ಅಭಿಮತ' ಪತ್ರಿಕೆಯ ಮುಖಪುಟದ ಚಿತ್ರಕ್ಕಾಗಿ ದೆಹಲಿ ಕರ್ನಾಟಕ ಸಂಘವನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. 'ಭಾರತ ಮತ್ತು ಕಜಕಿಸ್ತಾನದ ನಡುವಣ ರಾಜತಾಂತ್ರಿಕ ಸಂಬಂಧದ 25 ಸಂವತ್ಸರಗಳ ಸವಿನೆನಪು ಹಾಗೂ ಸೆಂಟರ್ ಫಾರ್ ಇಂಡಿಯನ್ ಕ್ಲಾಸಿಕಲ್–ಆಲ್ಮಟಿ ಕಜಕಿಸ್ತಾನದ 10ನೇ ವಾರ್ಷಿಕೋತ್ಸವದ ಆಚರಣೆಯ ಅಂಗವಾಗಿ ದೆಹಲಿ ಕರ್ನಾಟಕ ಸಂಘ ಇದೇ ಮಾರ್ಚ್ 29ರಂದು ಸಂಘದ ಸಭಾಂಗಣದಲ್ಲಿ ಖ್ಯಾತ ಭರತನಾಟ್ಯ ಕಲಾವಿದೆ ಶ್ರೀಮತಿ ಅಕ್ಮರಲ್ ಕೈನರ್ಝುರೋವ ಮತ್ತು ಅವರ ತಂಡದಿಂದ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಇಂತಹ ಕಾರ್ಯಕ್ರಮಗಳು ರಾಷ್ಟ್ರ ರಾಷ್ಟ್ರಗಳ ಮಧ್ಯದ ಪರಸ್ಪರ ಸಾಂಸ್ಕೃತಿಕ ರಾಜಕೀಯ, ಸ್ನೇಹವು ವರ್ಧಿಸಲಿ ಎಂದು ಹಾರೈಸುತ್ತೇನೆ. 'ಅಭಿಮತ' ಪತ್ರಿಕೆಯು ರಾಜಧಾನಿ ದೆಹಲಿಯ ಕನ್ನಡಿಗರ ಮುಖವಾಣಿಯಾಗಿದ್ದರೂ ಅದು ಅದರ ಜೊತೆ ಭಾರತದ, ಭಾರತೀಯ ಸಂಸ್ಕೃತಿಯ ಸಂವರ್ಧನೆ ಪ್ರಸಾರ ಕಾರ್ಯವನ್ನೂ ಮಾಡುತ್ತಿದೆ. ಅ

***ನಾಡೋಜ ಡಾ. ಎಂ. ಚಿದಾನಂದ ಮೂರ್ತಿ***
***ಬೆಂಗಳೂರು***



## ಬಾ. ಸಾಮಗ ಅವರಿಗೆ ಪ್ರಶಸ್ತಿ



ಹೊರನಾಡ ಕನ್ನಡಾಭಿವೃದ್ಧಿಯಲ್ಲಿ ಅಪ್ರತಿಮ ಸೇವೆ ಸಲ್ಲಿಸಿದ್ದನ್ನು ಪರಿಗಣಿಸಿ ದೆಹಲಿ ಕನ್ನಡಿಗ ಮತ್ತು ತುಳುವೆರ್ ಪತ್ರಿಕೆಗಳ ಮಾಜಿ ಸಂಪಾದಕ, ಯಕ್ಷಗಾನ ವಿದ್ವಾಂಸ ಬಾ. ಸಾಮಗ ಅವರಿಗೆ ಸಾಣೇಹಳ್ಳಿಯಲ್ಲಿ ಕರ್ನಾಟಕ ಸಾಂಸ್ಕೃತಿಕ ಕಲಾ ಪ್ರತಿಷ್ಠಾನ ಇತ್ತೀಚೆಗೆ ಏರ್ಪಡಿಸಿದ 12ನೇ ಅಖಿಲ ಭಾರತ ಯಕ್ಷಗಾನ ಬಯಲಾಟ–ಸಾಹಿತ್ಯ ಸಮ್ಮೇಳನದಲ್ಲಿ ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು 'ಜೀವಮಾನ ಸಾಧನೆ' ಪ್ರಶಸ್ತಿ ನೀಡಿ ಸನ್ಮಾನಿಸಿದರು. ಅ

***ಅಭಿಮತ ವರದಿ***


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimatha Monthly,
June-2017, Vol. No.27, Issue No.9, Price Rs.1/- RNI Regn. No. 53405/91, DL-SW-1/4016/16-18
Printout Date : June 8th / 9th, Postal Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.



## ರಾವ್-ನೆನಪಿನ ಪುಟಗಳಿಂದ









